ಸಂಪುಟ 01 | ಸಂಚಿಕೆ 29 | ಬುಧವಾರ 10 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಮಾನವ ಹಕ್ಕುಗಳ ದಿನ (Human Rights Day ? United Nations) 1948ರ ಡಿಸೆಂಬರ್ 10ರಂದು Universal Declaration of Human Rights (UDHR) ಅನ್ನು ಅಂಗೀಕರಿಸಿದ ದಿನ.ಪ್ರಪಂಚದ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳು, ಸ್ವಾತಂತ್ರ್ಯ, ಗೌರವ ಮತ್ತು ನ್ಯಾಯ ದೊರೆಯಬೇಕೆಂಬ ಸಂದೇಶವನ್ನು ಸಾರುತ್ತದೆ. ಮಾನವ ಹಕ್ಕು ಉಲ್ಲಂಘನೆ ವಿರುದ್ಧ ಜಾಗೃತಿ ಅಭಿಯಾನಗಳು, ಕಾರ್ಯಾಗಾರಗಳು, ಸಮ್ಮೇಳನಗಳು ನಡೆಯುತ್ತದೆ.

2) ನೊಬೆಲ್ ಪ್ರಶಸ್ತಿ ಪ್ರದಾನ ದಿನ (Nobel Prize Award Ceremony Sweden & Norway) ಫಿಸಿಕ್ಸ್, ಕೆಮಿಸ್ಟ್ರಿ, ಮೆಡಿಸಿನ್, ಸಾಹಿತ್ಯ, ಶಾಂತಿ ಮತ್ತು ಆರ್ಥಿಕಶಾಸ್ತ್ರ ವಿಭಾಗಗಳ ವಾರ್ಷಿಕ ನೊಬೆಲ್ ಪ್ರಶಸ್ತಿಗಳು ಈ ದಿನ ಅಧಿಕೃತವಾಗಿ ಪ್ರದಾನ ಮಾಡಲಾಗುತ್ತದೆ.ಶಾಂತಿ ಪ್ರಶಸ್ತಿ ಮಾತ್ರ ನಾರ್ವೆಯ ಒಸ್ಲೋದಲ್ಲಿ; ಉಳಿದ ಪ್ರಶಸ್ತಿಗಳು ಸ್ವೀಡನ್‌ನ ಸ್ಟಾಕ್‌ಹೋಮ್‌ನಲ್ಲಿ ಪ್ರದಾನ.ಜಗತ್ತಿನ ಅತ್ಯಂತ ಗೌರವಾನ್ವಿತ ವೈಜ್ಞಾನಿಕ ಮತ್ತು ಸಾಮಾಜಿಕ ಸಾಧನೆಗಳ ಗುರುತಿಸುವ ದಿನ.

3) ಭಾರತ ಧರ್ಮನಿರಪೇಕ್ಷ ದಿನ / ಸಂವಿಧಾನ ಸಮಾನತೆ ಜಾಗೃತಿ ಕಾರ್ಯಕ್ರಮಗಳುಇದು ಅಧಿಕೃತ ರಾಷ್ಟ್ರೀಯ ರಜೆ ಅಥವಾ ಘೋಷಿತ ದಿನವಲ್ಲ, ಆದರೆ ಹಲವೆಡೆ ಡಿಸೆಂಬರ್ 10 ಅನ್ನು ಮಾನವ ಹಕ್ಕು ಜಾಗೃತಿ ಮತ್ತು ಸಂವಿಧಾನಾತ್ಮಕ ಮೌಲ್ಯಗಳ ಪ್ರಚಾರಕ್ಕಾಗಿ ಬಳಸಲಾಗುತ್ತದೆ.)

## ಸುಭಾಷಿತ

ಮಾತಿನ ಬೆಲೆ ತಿಳಿದವರು, ಮಾತನ್ನು
ಮೊದಲು ಹೃದಯದ ತಕ್ಕಡಿಯಲ್ಲಿ ತೂಗಿ,
ಆನಂತರ ಹೊರಗೆ ಹಾಕುತ್ತಾರೆ.

ಕಬೀರ್ ದಾಸ್

## ರಾಜ್ಯಸರ್ಕಾರದ ವಿರುದ್ಧ ಸಿಡಿದೆದ್ದು! ರೈತರು ಸುವರ್ಣಸೌಧಕ್ಕೆ ಮುತ್ತಿಗೆ

# ರೈತ ಮುಖಂಡರು, ಬಿಜೆಪಿ ನಾಯಕರು ವಶಕ್ಕೆ



**ಬೆಳಗಾವಿ:** ರಾಜ್ಯಸರ್ಕಾರದ ರೈತ ವಿರೋಧಿ ಧೋರಣೆ ಖಂಡಿಸಿ ತಕ್ಷಣವೇ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ತೆರೆಯಬೇಕೆಂದು ಒತ್ತಾಯಿಸಿ ಪ್ರತಿಪಕ್ಷ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸುವ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಿತು.

ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿ-ಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್, ವಿಧಾನಪ-ರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಮುನಿರತ್ನ, ಬಾಲಚಂದ್ರ ಜಾರಕಿಹೊಳಿ, ಶಶಿಕಲಾ ಜೊಲ್ಲೆ, ಮೇಲನೆ ಸದಸ್ಯರಾದ ರವಿಕುಮಾರ್, ನವೀನ್, ಭಾರತಿಶೆಟ್ಟಿ, ರೈತ ಮೋರ್ಚಾ ಅಧ್ಯಕ್ಷ ನಡಹಳ್ಳಿ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಸೇ-ರಿದಂತೆ ವಿವಿಧ ಮೋರ್ಚಾಗಳ ಅಧ್ಯಕ್ಷರು, ಪದಾಧಿಕಾರಿಗಳು ಮತ್ತಿತರರು ಭಾಗಿಯಾಗಿದ್ದರು. ಬೆಳಗಾವಿಯ ಮಾಲಿನಿ ಮೈದಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ರೈತರು ಭಾಗಿಯಾಗಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿದರು. ಮಾಲಿನಿ ಮೈದಾನದಿಂದ ರಾಷ್ಟ್ರೀಯ ಹೆದ್ದಾರಿ 4 ರ ಮೂಲಕ ಸುವರ್ಣ ಸೌಧ ಮುತ್ತಿಗೆ ಹಾಕಲು ಪ್ರಯತ್ನಿಸಿದರಾದರೂ ಪೊಲೀಸರು ಅದಕ್ಕೆ ಅವಕಾಶ ಕೊಡದೆ ರೈತರನ್ನು ವಶಕ್ಕೆ ಪಡೆದರು. ತೊಲಗಲಿ ತೊಲಗಲಿ ಕಾಂಗ್ರೆಸ್ ಸರ್ಕಾರ ತೊಲಗಲಿ, ಭಾಟಿ ಏಟು ಭಾಟಿ ಏಟು ಕೊಡಲೇಬೇಕು ಭಾಟಿ ಏಟು ಎಂಬ ಧಿಕ್ಕಾರ ಘೋಷಣೆಗಳನ್ನು ಕೂಗಿದ ಪ್ರತಿಭಟನಾ ರೈತರು ತೊಗರಿಬೇಳೆ, ಮೆಕ್ಕೆ ಜೋಳವನ್ನು ಪ್ರದರ್ಶನ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಹಸಿರು ಟವೆಲ್ ಹಾಗೂ ಹಳದಿ ಬಣ್ಣದ ರುಮಾಲು ಧರಿಸಿದ್ದ ಪ್ರತಿಭಟನಾ ನಿರತರು ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಅನಗತ್ಯವಾಗಿ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದೆ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ದೇಶದಲ್ಲೇ ಅತೀ ಹೆಚ್ಚು ರೈತರು ಆತಹತ್ಯೆ ಮಾಡಿಕೊಂಡಿರುವ ರಾಜ್ಯವೆಂದರೆ ಕರ್ನಾಟಕ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ರೈತರ ಆತಹತ್ಯೆ ಪ್ರಕರಣಗಳು ಸರ್ವೇ ಸಾಮಾನ್ಯವಾಗಿವೆ. ಅನ್ನದಾತರ ಹಿತ ಕಾಪಾಡುವ ಬದಲು ಸಿಎಂ ಮತ್ತು ಡಿಸಿಎಂ ಕುರ್ಚಿ ಕದನದಲ್ಲಿ ನಿರತರಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ರಾಜ್ಯ ಸರ್ಕಾರ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಇತ್ಯರ್ಥಪಡಿಸುತ್ತಿರಲಿಲ್ಲ. ರೈತರು ರಸ್ತೆಗಿಳಿದು ಹೆದ್ದಾರಿಗಳನ್ನು ಬಂದ್ ಮಾಡಿ ಬಿಸಿ ಮುಟ್ಟಿಸಿದರು. ವಿಧಿಯಿಲ್ಲದೆ ಬೆಂಬಲ ಬೆಲೆ ನೀಡಿ ಖರೀದಿಸಿದರು.ರೈತರ ಆತಹತ್ಯೆಗಳು ನಿರಂತರವಾಗಿ ಮುಂದುವರೆಯುತ್ತಿದ್ದರೂ ಸರ್ಕಾರ ಮಾತ್ರ ಅವರನ್ನು ಕಣ್ಣೆತ್ತಿಯೂ ನೋಡದೇ ಕುರುಡಾಗಿದೆ ಎಂದು ಕಟಕಿಯಾಡಿದರು.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗಾನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ ಸಿಂಧನೂರು ವಲಯದಲ್ಲಿ ಖಾಲಿ ಇರುವ 1 ಅಂಗನವಾಡಿ ಕಾರ್ಯಕರ್ತೆ, 7 ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದು, 7 ಜನವರಿ 2026 ರೊಳಗೆ ಅರ್ಜಿ ಸಲ್ಲಿಸಲು ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ಲಿಂಗನಗೌಡ ಪತ್ರಿಕೆ ಪ್ರಕಟಣೆ ಹೊರಡಿಸಿದ್ದಾರೆ.**

ತಾಲೂಕಿನ ಸಿಂಧನೂರು ವಲಯದ ಸತ್ಯವತಿ-ಕ್ಯಾಂಪಿನ 1 ಅಂಗನವಾಡಿ ಕಾರ್ಯಕರ್ತೆ ಖಾಲಿ ಇರುವ ಹುದ್ದೆಗೆ ಅರ್ಜಿಯನ್ನು ಪರಿಶಿಷ್ಟ ಜಾತಿಯ ಅಭ್ಯರ್ಥಿ ಅರ್ಜಿ ಸಲ್ಲಿಸಬಹುದು. ಸತ್ಯವತಿ ಕ್ಯಾಂಪ್, ಸಿದ್ರಾಂಪೂರ ಅಂಗನವಾಡಿ ಸಹಾಯಕಿಯರ ಹುದ್ದೆ ಖಾಲಿ ಇದ್ದು, ಪರಿಶಿಷ್ಟ ಜಾತಿಯ ಅಭ್ಯರ್ಥಿ ಅರ್ಜಿ ಸಲ್ಲಿಸಬಹುದು. ಈರಣ್ಣ ಕ್ಯಾಂಪ್, ಇಂದಿರಾ ಕಾಲೋನಿ ವಾರ್ಡ್ ನಂ 12, ಸಿಂಗಾಪೂರ, ಗಾಂಧಿನಗರ, ಅಂಭಾನಗರ ಕ್ಯಾಂಪ್ ನಲ್ಲಿ ಅಂಗನವಾಡಿ ಸಹಾಯಕಿಯರ ಹುದ್ದೆ ಖಾಲಿ ಇದ್ದು, ಇತರೆ ಜಾತಿಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.



2026 ಜನವರಿ 7 ರವರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇಲಾಖೆ ವೆಬ್ ಸೈಟ್ ನೋಡಬಹುದು ಎಂದು ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ಲಿಂಗನಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವವಿದ್ಯಾಲಯ ಪುರುಷರ ವಾಲಿಬಾಲ್ ತಂಡದ ಮುಖ್ಯ ತರಬೇತುದಾರರಾಗಿ ಶಿವ.ಕೆ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಡಿ.10 ರಿಂದ 14 ರವರೆಗೆ ಜೆ-ಎನ್ ಟಿಯು ವಿಶ್ವವಿದ್ಯಾಲಯ ಕಾಕಿನಾಡ ಆಂಧ್ರ ಪ್ರದೇಶದಲ್ಲಿ ನಡೆಯುವ ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯ ಪುರುಷರ ವಾಲಿಬಾಲ್ ಕ್ರೀಡಾಕೂಟಕ್ಕೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ತಂಡದ ಮುಖ್ಯ ತರಬೇತುದಾರರಾಗಿ ಸಿಂಧನೂರು ಡಿಗ್ರಿ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಶಿವ.ಕೆ ಆಯ್ಕೆಯಾಗಿದ್ದಾರೆ.**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿ, ಮುಖ್ಯ ತರಬೇತುದಾರರಾಗಿ ಆಯ್ಕೆಯಾದ ಶಿವು ಕೆ ಅವರು ನಮ್ಮ ಕಾಲೇ-



ಜಿಗೂ ಹಾಗೂ ತಾಲೂಕಿಗೂ ಕೀರ್ತಿ ತಂದಿದ್ದಾರೆ. ಡಿಗ್ರಿ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಪ್ರಾಚಾರ್ಯರು, ಭೋದಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿ ಬಳಗದಿಂದ ಶಿವು ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

## ಇಂದು ಕೃಷಿ ವಿವಿಯಲ್ಲಿ ತರಬೇತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 09 (ಕರ್ನಾಟಕ ವಾರ್ತೆ): ಭಾರತ ಸರ್ಕಾರದ ಜಲಶಕ್ತಿ ಸಚಿವಾಲಯದ ಜಲಸಂಪನ್ಮೂಲ ಇಲಾಖೆ, ನದಿ ಅಭಿವೃದ್ಧಿ ಮತ್ತು ಗಂಗಾ ಪುನರುಜ್ಜೀವನ ಕೇಂದ್ರ ಬೆಂಗಳೂರಿನ ನೈಋತ್ಯ ಪ್ರದೇಶದ ಅಂತರ್ಜಲ ಮಂಡಳಿಯಿಂದ ಜಲಚರ ನಕ್ಷೆ, ಅಂತರ್ಜಲ-ಸಂಬಂಧಿತ ಸಮಸ್ಯೆಗಳು ಮತ್ತು ಅಂತರ್ಜಲ ನಿರ್ವಹಣೆ ಕುರಿತು 3ನೇ ಶ್ರೇಣಿ ತರಬೇತಿ ಕಾರ್ಯಕ್ರಮವನ್ನು ನಗರದ ಕೃಷಿ ಇಂಜಿನಿಯರಿಂಗ್ ಕಾಲೇಜಿನ ಸಿಲ್ವರ್ ಜುಬಿಲಿ ಸೆಮಿನಾರ್ ಹಾಲ್‌ನಲ್ಲಿ ಡಿಸೆಂಬರ್ 10ರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.**

ಬೆಂಗಳೂರಿನ ಸಿಜಿಡ್ಲ್ಯೂಬಿ, ಎಸ್.ಡ್ಲ್ಯೂಆರ್ ಪ್ರಾದೇಶಿಕ ನಿರ್ದೇಶಕರಾದ ಜಿ.ಕೃಷ್ಣಮೂರ್ತಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಯುಎಎಸ್ ಉಪಕುಲಪತಿಗಳಾದ ಡಾ.ಹನುಮಂತಪ್ಪ, ಕಾಲೇಜ್ ಆಫ್ ಅಗ್ರಿಕಲ್ಚರಲ್ ಇಂಜಿನಿಯರಿಂಗ್ ಡೀನ್ ಡಾ.ಎಂ.ಎಸ್.ಅಯ್ಯನಗೌಡರು, ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ವಿಸ್ತರಣೆ ನಿರ್ದೇಶಕರಾದ ಎ.ಆರ್. ಕುರುಬರ್ ಅವರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಎಸ್.ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಸಂಗಮೇಶ್ವರ ಪ್ರೌಢಶಾಲೆಯ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಮಂಗಳವಾರ ಹಮ್ಮಿಕೊಳ್ಳಲಾಯಿತು.**

ಸ್ಥಳೀಯ ರಿಲಾಯನ್ಸ್ ಕಾಲೇಜಿನ ಉಪನ್ಯಾಸಕರಾದ ತನ್ವೀರ ಅತ್ತಾರ ಇವರು ಗಣಿತ ವಿಷಯದ ಕು-ರಿತು ತಮ್ಮ ಉಪನ್ಯಾಸದ ಮೂಲಕ ಉಪಯುಕ್ತವಾದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಸತತ



ನಾಲ್ಕು ಅವಧಿಯನ್ನು ತೆಗೆದುಕೊಂಡು ಅವರು ಈ ಉಪನ್ಯಾಸವನ್ನು ನೀಡಿದರು. ಇದೇ ಸಂದರ್ಭದಲ್ಲಿ ಉಪನ್ಯಾಸಕ ತನ್ವೀರ್ ಅತ್ತಾರ ಇವರನ್ನು ಸಂಸ್ಥೆಯ ಪರವಾಗಿ ಪ್ರೌಢಶಾಲೆ ಸಿಬ್ಬಂದಿಗಳು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಹತ್ತನೇ ತರಗತಿ ವರ್ಗ ಶಿಕ್ಷಕ ಎಸ್.ಸಿ.ಗುಡಗುಂಟಿ, ಹಿರಿಯ ಶಿಕ್ಷಕ ಬಿ.ಐ.ಹಿರೇಹೊಳಿ, ದೈಹಿಕ ಶಿಕ್ಷಕ ಎಂ.ಎಸ್.ರಾಯಗೊಂಡ, ದುಳಿಂಗ ಪೂಜಾರಿ, ಕೆ.ಎನ್. ನಾಲತವಾಡ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಅರ್ಜಿ ಶೀಘ್ರ ವಿಲೆ: ರಾಯಚೂರು ಜಿಲ್ಲಾಧಿಕಾರಿ ನಿತೀಶ್ ಕೆ ಅವರಿಗೆ ಕಂದಾಯ ಇಲಾಖೆಯಿಂದ ಅಭಿನಂದನಾ ಪತ್ರ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 09 (ಕರ್ನಾಟಕ ವಾರ್ತೆ): ಅಟಲ್‌ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿಯಲ್ಲಿ ರಾಜ್ಯದ ಸಾರ್ವಜನಿಕ-ರಿಗೆ ವಿವಿಧ ಪ್ರಮಾಣ ಪತ್ರಗಳ ಸೇವೆಯನ್ನು ನೀಡಲು ರಾಯಚೂರು ಜಿಲ್ಲೆಯ ನಾಡಕಚೇ-ರಿಗಳಲ್ಲಿ ಅಕ್ಟೋಬರ್ 2025ರ ಮಾಹೆಯಲ್ಲಿ ಸ್ವೀಕರಿಸಲಾಗಿರುವ 26,831 ಅರ್ಜಿಗಳನ್ನು ನಿಗದಿತ ಅವಧಿಗಿಂತ ಮೊದಲೇ ಶೇ.99.93ರಷ್ಟು ವಿಲೇವಾರಿ ಮಾಡಿ 6.4 ಸಿಗ್ಮಾ ಮೌಲ್ಯವನ್ನು ಪಡೆದಿರುತ್ತೀರಿ.**

8.49 ವಿಲೇವಾರಿ ಸೂಚ್ಯಂಕದ ಪ್ರಕಾರ ತಮ್ಮ ಜಿಲ್ಲೆಯಲ್ಲಿ 9.49 ಪಟ್ಟು ನಿಗಧಿತ



ಅವಧಿಗಿಂತ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಿ, ಅಕ್ಟೋಬರ್-2025ರ ಮಾಹೆಯಲ್ಲಿ ತಮ್ಮ ಜಿಲ್ಲೆಯು ರಾಜ್ಯಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುವುದು ಶ್ಲಾಘನೀಯ ಎಂದು ಕಂದಾಯ ಇಲಾಖೆಯ ಆಯುಕ್ತರಾದ ಮುಲ್ಲೆ ಮುಹಿಲನ್ ಎಂ.ಪಿ.ಅವರು ರಾಯಚೂರಿನ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರಿಗೆ ಅಭಿನಂದನೆ ತಿಳಿಸಿದ್ದಾರೆ. ನಿಮ್ಮ ಜಿಲ್ಲೆಯಲ್ಲಿನ ಈ ಕಾರ್ಯ ಸಾಧನೆಗೆ ನಿಮ್ಮ ಹಾಗೂ ನಿಮ್ಮ ನಾಡ ಕಚೇರಿ ಅಥ-ವಾ ಅಟಲ್‌ಜೀ ಜನಸ್ನೇಹಿ ಕೇಂದ್ರದ ಸಿಬ್ಬಂದಿಗಳ ಸಹಕಾರ, ಕಾರ್ಯತತ್ಪರತೆ ಕಾರಣವಾಗಿರುತ್ತದೆ. ಅದ್ದರಿಂದ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದ ಪರವಾಗಿ ನಿಮ್ಮ ತಂಡಕ್ಕೆ ನನ್ನ ಅಭಿನಂದನೆಯನ್ನು ವ್ಯಕ್ತಪಡಿಸಲು ಇಚ್ಚಿಸುತ್ತೇನೆ. ಇನ್ನು ಮುಂದಿನ ದಿನಗಳಲ್ಲಿಯೂ ಸಹ ನಿಮ್ಮಿಂದ ಇದೇ ರೀತಿಯ ಸಹಕಾರ ಹಾಗೂ ಕಾರ್ಯಕ್ಷಮತೆಯನ್ನು ನಿರೀಕ್ಷಿಸುತ್ತೇನೆ ಎಂದು ಕಂದಾಯ ಇಲಾಖೆಯ ಆಯುಕ್ತರು ಅಭಿನಂದನಾ ಪತ್ರದಲ್ಲಿ ತಿಳಿಸಿದ್ದಾರೆ.

## ವೃತ್ತಿ ಕೌಶಲ್ಯ ತರಬೇತಿ ಕೇಂದ್ರ ಉದ್ಘಾಟಿಸಿದ ಆರ್ ಸಿದ್ದನಗೌಡ ತುರುವಿಹಾಳ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಸೇವಾ ಜನ ಶಿಕ್ಷಣ ಸಂಸ್ಥಾನ, ಬುಡಕಟ್ಟು ಕೌಶಲ್ಯ ಕೇಂದ್ರ ರಾಯಚೂರು ವತಿಯಿಂದ ಭಾರತ ಸರ್ಕಾರದ ಕೌಶಲಾಭಿವೃದ್ಧಿ ಹಾಗೂ ಉದ್ಯಮ ಶೀಲತಾ ಹಾಗೂ ಬುಡಕಟ್ಟು ವ್ಯವಹಾರಗಳ ಸಂಂ-ಯುಕ್ತಾಶ್ರಯದಲ್ಲಿ ಇಂದು ಹೈಟೆಕ್ ಕಂಪ್ಯೂಟ-ರ್ ಶಿಕ್ಷಣ ತರಬೇತಿ ಕೇಂದ್ರ ಮಸ್ಕಿಯಲ್ಲಿ "ರಿಪೇರಿ ಮತ್ತು ಮೆಂಟೇನೆನ್ಸ್ ಅಸಿಸ್ಟೆಂಟ್ ಸ್ಮಾರ್ಟ್ ಫೋನ್ಸ್" ವೃತ್ತಿ ಕೌಶಲಗಳ ತರಬೇತಿ ಕೇಂದ್ರದ ಉದ್ಘಾಟನೆ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ಕಾರ್ಯಕ್ರಮ ಉದ್ಘಾಟನೆಯನ್ನು ಸನ್ಮಾನ್ಯ ಶ್ರೀ ಆರ್ ಸಿದ್ದನಗೌಡ ತುರ್ವಿಹಾಳ ಅಧ್ಯಕ್ಷರು, ನಗರ ಯೋಜನ ಪ್ರಾಧಿಕಾರ ಮಸ್ಕಿ ಮತ್ತು ಅಧ್ಯಕ್ಷತೆಯನ್ನು ಶ್ರೀ ಸದಾನಂದ ಎಂ. ಪೂಜಾರಿ ನಿರ್ದೇಶಕರು ಜೆ ಎಸ್ ಎಸ್ ಮತ್ತು ಟಿ ಎಸ್ ಸಿ ರಾಯಚೂರ ಮತ್ತು ಉಪಸ್ಥಿತಿ ಶ್ರೀ




ಮೌನೇಶ್ ನಾಯಕ್ ಯುವ ಮುಖಂಡರು ಮಸ್ಕಿ ಮತ್ತು ಶ್ರೀ ನರಸರೆಡ್ಡಿ ಮುಖ್ಯ ಅಧಿಕಾರಿಗಳು ಮಸ್ಕಿ ಮತ್ತು ಶ್ರೀ ಮಲ್ಲಯ್ಯ ಪುರಸಭೆ ಸದಸ್ಯರು ಮಸ್ಕಿ ಮತ್ತು ಶ್ರೀ ನಾಗಭೂಷಣ ಸೊಸೈಟಿ ಅಧ್ಯಕ್ಷರು ಮಸ್ಕಿ ಮತ್ತು ಹೈಟೆಕ್ ಕಂಪ್ಯೂಟರ್ ಶಿಕ್ಷಣ ತರಬೇತಿ ಕೇಂದ್ರದ ವ್ಯವಸ್ಥಾಪಕರು ಹಾಗೂ ಸಂಪನ್ಮೂಲ ವ್ಯಕ್ತಿಗಳು ಟಿ.ಎಸ್. ಸಿ ಮಸ್ಕಿ ತರಬೇತಿದಾರರಾದ ಶ್ರೀ ಪಂಪಾಪತಿ ಹೊಸಪೇಟೆ ಮಸ್ಕಿ ಮತ್ತು ಶ್ರೀ ವಿಶ್ವನಾಥ್ ಅಸಿಸ್ಟೆಂಟ್ ಪ್ರೋಗ್ರಾಮ್ ಆಫೀಸರ್ ರಾಯಚೂರ ಮತ್ತು ಚಂದ್ರಶೇಖರ್ ಬೋವಿ ಮಸ್ಕಿ ಮತ್ತು ಕಲಿಕಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಕುರಿತು ಮಾತನಾಡಿದ ಸನ್ಮಾನ್ಯ ಶ್ರೀ ಆರ್ ಸಿದ್ದನಗೌಡ ತುರ್ವಿಹಾಳ ಅವರು ಎಲ್ಲಾ ವಿದ್ಯಾರ್ಥಿಗಳು ಆಸಕ್ತಿಯಿಂದ ತರಬೇತಿಯನ್ನ ಸಂಪೂರ್ಣವಾಗಿ ಕಲಿತು ಮುಂದಿನ ದಿನಗಳಲ್ಲಿ ತಮ್ಮದೇ ಆದಂತ ವ್ಯವಹಾರವನ್ನು ಸೃಷ್ಟಿಸಿಕೊಂಡು ಹೆಚ್ಚಿನ ಆದಾಯವನ್ನು ಗಳಿಸಿದಾಗ ತಮ್ಮ ಕುಟುಂಬವನ್ನು ನಿಭಾಯಿಸುವ ಶಕ್ತಿ ತಮ್ಮಲ್ಲಿ ಬರುತ್ತದೆ ಮತ್ತು ದೇಶದ ಹಿತ ಶಕ್ತಿಗಾಗಿ ನಾವು ಶ್ರಮಪಟ್ಟು ದುಡಿಯಬೇಕು ಅವಾಗ ಮಾತ್ರ ಇಂಥ ಯೋಜನೆಗಳು ಯಶಸ್ವಿಗೊಳುತ್ತದೆ. ಸರಕಾರದ ಹಲವಾರು ಯೋಜನೆಗಳು ಇದ್ದು, ವಿವಿಧ ವೃತ್ತಿ ಕೌಶಲ ತರಬೇತಿಗಳ ಕಂಪ್ಯೂಟರ, ಫೋನ್ ರಿಪೇರಿ ಇಂತಹ ತರಬೇತಿ ಪಡೆದುಕೊಂಡಾಗ ಯಶಸ್ವಿಯಾಗಬಹುದು ಕಾರಣ ಈಗಿನ ಕಾಲದಲ್ಲಿ ತಂತ್ರಜ್ಞಾನಕ್ಕೆ ತುಂಬಾ ಮಹತ್ವವಾಗಿದ್ದು ಇಂತಹ ತರಬೇತಿ ತೆಗೆದುಕೊಂಡಾಗ ಆದಾಯವು ಹೆಚ್ಚುತ್ತದೆ ಆದ್ದರಿಂದ ಎಲ್ಲರೂ ಆಸಕ್ತಿಯಿಂದ ಕಲಿಯಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನು ಹೇಳಿದರ ಜೊತೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ವೈಯಕ್ತಿಕ ಹಣದಿಂದ ಬಸ್ ಪಾಸಿನ ವ್ಯವಸ್ಥೆ ಮಾಡಿಕೊಡುವುದಾಗಿ ಈ ಸಂದರ್ಭದಲ್ಲಿ ತಿಳಿಸಿದರು.

ವೈಯಕ್ತಿಕ ಹಣದಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಪಾಸಿನ ವ್ಯವಸ್ಥೆ ಮಾಡಿಸುತ್ತೇನೆ: ಆರ್ ಸಿದ್ದನಗೌಡ ತುರ್ವಿಹಾಳ

ಕೌಶಲ್ಯ ತರಬೇತಿ ಪಡೆದುಕೊಳ್ಳುವ ವಿದ್ಯಾರ್ಥಿಗಳು ಸುಮಾರು 30 ರಿಂದ 60 ಕಿಲೋಮೀಟರ್ ದೂರದಿಂದ ಬರ್ತಕಂತ ವಿದ್ಯಾರ್ಥಿಗಳು ದಿನಕ್ಕೆ 70 ರಿಂದ 80 ರೂಪಾಯಿ ಖರ್ಚು ಆಗುತ್ತದೆ ಆದ್ದರಿಂದ ವಿದ್ಯಾರ್ಥಿಗಳು ಈ ಸಮಸ್ಯೆಯನ್ನ ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಸಿದ್ದನಗೌಡ ತುರವಿಹಾಳ ಅವರಿಗೆ ತಿಳಿಸಲಾಯಿತು. ಈ ಸಂದರ್ಭದಲ್ಲಿ ಸ್ವಂತ ಹಣದಿಂದ ವಿದ್ಯಾರ್ಥಿಗಳಿಗೆ ಪಾಸಿನ ವ್ಯವಸ್ಥೆ ಮಾಡುವುದಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಭರವಸೆಯನ್ನು ನೀಡಿದರು.

## ಸಾಹಿತ್ಯ ಸಿಂಚನ

ಶೂನ್ಯಸಂಪಾದನೆ.!

ಎಷ್ಟೆಲ್ಲ ಭರವಸೆಯಿಟ್ಟರೂ
ಏನೆಲ್ಲ ನಂಬಿಕೆ ನೆಟ್ಟರೂ
ಹೇಗೆಲ್ಲ ಅಭಯ ಕೊಟ್ಟರೂ
ಕೆಲವೊಮ್ಮೆ ಮನದೊಳಗಣ
ನರಳಿಕೆ ನಿಲ್ಲುವುದೇ ಇಲ್ಲ.!
ಕನಲಿಕೆ ಕರಗುವುದೇ ಇಲ್ಲ.!

ಎಷ್ಟೆಷ್ಟೆಲ್ಲ ಸಂತೈಸಿದರೂ
ಏನೇನೆಲ್ಲ ರಮಿಸಿದರೂ
ಹೇಗೇಗೆಲ್ಲ ಲಾಲಿಸಿದರೂ
ಕೆಲವೊಮ್ಮೆ ಒಡಲೊಳಗಣ
ಬಿಕ್ಕಳಿಕೆ ನಿಲ್ಲುವುದೇ ಇಲ್ಲ.!
ಕನವರಿಕೆ ಕಳೆವುದೇ ಇಲ್ಲ.!

ಎಷ್ಟೆಲ್ಲ ಹಣತೆ ಹಚ್ಚಿದರೂ
ಏನೆಲ್ಲ ಜ್ಯೋತಿ ಬೆಳಗಿದರೂ
ಹೇಗೆಲ್ಲ ಬೆಳಕ ತುಂಬಿದರೂ
ಕೆಲವೊಮ್ಮೆ ಎದೆಯಂಗಳದ
ಕತ್ತಲೆ ನೀಗುವುದೇ ಇಲ್ಲ.!
ಅಂಧಕಾರ ಅಳಿವುದೇ ಇಲ್ಲ.!

ಹು ಎಲ್ಲವೂ ಸರಿಯಾಯ್ತು
ಎನ್ನುವಷ್ಟರಲ್ಲೇ ಮತ್ತೆ..
ನೋವಿನ ಆಕ್ರಂದನ.!
ಆಹಾ ಬೆಳಕು ಮೂಡಿತು
ಎನ್ನುವಷ್ಟರಲ್ಲೇ ಮತ್ತೆ..
ಕಾರ್ಗತ್ತಲೆಯ ಆಕ್ರಮಣ.!

ಎಲ್ಲೆಡೆ ಹತ್ತಿಸುತ್ತಿ ಕಡೆಗೆ
ಮೊದಲಿನಲ್ಲಿಗೇ ಬಂದು
ನಿಲ್ಲುವ ಯಾತನಾ ಲಹರಿ.!
ಅಗೆದು ಬಗೆದು ಕಡೆಗೆ
ಶೂನ್ಯಸಂಪಾದನೆಯ ಪರಿ.!
ಬತ್ತುವ ಜೀವಚೈತನ್ಯ ಝರಿ.!

ಎ.ಎನ್.ರಮೇಶ್. ಗುಬ್ಬಿ

## ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿಯವರಿಗೆ ಅಂಕಲಿಶ್ರೀ ರಾಜ್ಯಮಟ್ಟದ ಪ್ರಶಸ್ತಿಗೆ ಭಾಜನ

❏ ನೈಜ್ಯ ದೆಸೆ ನ್ಯೂಸ್

ಕರ್ನಾಟಕ ರಾಜ್ಯ ನಾಟಕ ಬರಹಗಾರರ ಕವಿಗಳ ಸಂಘ (ರಿ) ಬೆಂಗಳೂರು ಹಾಗೂ ರಾಯಚೂರು ಜಿಲ್ಲಾ ನಾಟಕ ಬರಹಗಾರರು ಕವಿಗಳ ಸಂಘದ ಪದಾಧಿಕಾರಿಗಳ ಪದಗ್ರಹಣ ಸಮಾರಾಂಭದಲ್ಲಿ ರಾಯಚೂರು ಜಿಲ್ಲೆ ಲಿಂಗಸಗೂರು ತಾಲೂಕಿನ ನಾಗರಹಾಳದಲ್ಲಿ ದಿನಾಂಕ 7.12.2025 ರಂದು ಅಂಧ ಅನಾಥ ಮಕ್ಕಳ ಬಾಳಿಗೆ ಬೆಳಕಾದ ಗದುಗಿನ ವೀರೇಶ್ವರ ಪುಣ್ಯಶ್ರಮದ ಪರಮಪೂಜ್ಯ ಕಲ್ಲಯ್ಯಜ್ಜನವರ ಮತ್ತು ದಾಸೋಹ ರತ್ನ ಭಾವೈಕ್ಯಬ್ರಹ್ಮ ಸುಕ್ಷೇತ್ರ ಅಂಕಲಿಮಠದ ಶ್ರೀ ಶ್ರೀ



ಶ್ರೀ ಬ್ರಹ್ಮ ಶ್ರೀ ವೀರಭದ್ರ ಮಹಾಸ್ವಾಮಿಗಳು ಅವರ ತುಲಾಭಾರ ಕಾರ್ಯಕ್ರಮದಲ್ಲಿ. ಸಿಂದನೂರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪಂಪಯ್ಯಸ್ವಾಮಿ ಸಾಲಿಮಠ ಅವರಿಗೆ ರಾಜ್ಯಮಟ್ಟದ ಅಂಕಲಿಶ್ರೀ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಫಣನೀಯ ಸೇವೆಗೆ ಅಲವಾರು ಸಾಧಕರನ್ನು ಗುರುತಿಸಿ ರಾಜ್ಯಮಟದ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದೇ ಸಂಧರ್ಭದಲ್ಲಿ ಶ್ರೀ ನಿರುಪಾದಿ ಕವಿಗಳು ನಾಗರಹಾಳ ವಿರಚಿತ ಚೆನ್ನಿಯ ಚಲ್ಲಾಟ ಗೌಡನ ಅರ್ಭಟ. ಶಿವರಡ್ಡಿ ಸಣ್ಣಗೌಡ್ರು ಭೂತಲದಿನ್ನಿ ವಿರಚಿತ. ಪ್ರೀತಿ ಹೋದರು ಸ್ನೇಹ ಬೇಕು.. ದುರಗೇಶ ಬೈಲಗುಡ್ಡ ವಿರಚಿತ ಪ್ರೇಮದ ಹುಚ್ಚು ಸೇಡಿನ ಕಿಚ್ಚು ಎಂಬ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಗದುಗಿನ ವೀರೇಶ್ವರ ಪುಣ್ಯಶ್ರಮದ ಪರಮಪೂಜ್ಯ ಕಲ್ಲಯ್ಯಜ್ಜನವರು.

ತಿಮ್ಮಾಪುರ ಕಲ್ಯಾಣ ಆಶ್ರಮದ ಪರಮ ಪೂಜ್ಯ ಮಹಾಂತ ಸ್ವಾಮೀ–ಜಿಗಳು. ಹಾಗೂ ಮಾತಾ ಮಾಣಿಕೇಶ್ವರ ಮಠದ ಪರಮಪೂಜ್ಯ ಮಾತೃಶ್ರೀ ನಂಬಿಕೆಶ್ವರ ಅಮ್ಮನವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ನಾಟಕ ಬರಹಗಾರರ ಸಂಘ ಬೆಂಗಳೂರು, ಸನ್ಮಾನ್ಯ ಶ್ರೀ ಶಂಕರ್ ಹೂವಿನಪ್ಪರಗಿ ವಹಿಸಿದ್ದರು. ಕವಿಗಳು ಸಾಹಿತಿಗಳು ಊರಿನ ಹಿರಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಟ್ಟರು.

## ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಕಾರ್ಯಕ್ರಮ :ಸಿಂಧನೂರು



❏ ನೈಜ್ಯ ದೆಸೆ ನ್ಯೂಸ್

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ರಾಗಲಪರ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಇಂದು ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಸದರಿ ಕಾರ್ಯಕ್ರಮವನ್ನು ಮಾನ್ಯ ಆಯುಷ್ ವೈದ್ಯಾಧಿಕಾರಿಗಳು ಶ್ರೀಮತಿ ಡಾ. ಶ್ವೇತಾಂಬರಿ ಇವರು ಗರ್ಭಿಣಿ ತಾಯಂದಿರನ್ನು ಹಾಗೂ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಲ್ಲಿ ಗಂಡಾಂತರ ಗರ್ಭಿಣಿಯರ ಆರೋಗ್ಯ ತಪಾಷಣೆ ಮಾಡಲಾಯಿತು, ಜೊತೆಗೆ 12ವಾರದ ಒಳಗೆ ನೋಂದಣಿ ಮಾಡಿಸಬೇಕು ಯಾವುದೇ ಮೂಢನಂಬಿಕೆ ಬಿಡಬೇಕು,ರಕ್ತ ಹೀನತೆ ಹೋಗಲಾಡಿಸಲು ಐರನ್ ಫಾಲಿಕ್ ಅಸ್ಯೆಡ್ ಕಾಲ್ಸಿಯಂ ಮಾತ್ರೆ ತೆಗೆದುಕೊಂಡು, ಸರಿಯಾಗಿ ಆಹಾರದ ಪದ್ಧತಿ ಇರಬೇಕು ಪೌಷ್ಟಿಕ ಆಹಾರ ಪದ್ಧತಿ ಬಗ್ಗೆ ವೈಯಕ್ತಿಕ ಸ್ವಚ್ಛತೆಯ ಕುರಿತು ಚಳಿಗಾಲದಲ್ಲಿ ತಾಯಿ ಮಗುವಿನ ರಕ್ಷಣೆಯ ಕುರಿತು ಮಾಹಿತಿ ನೀಡಲಾಯಿತು ಸಾಂಕ್ರಾಮಿಕ ರೋಗಗಳ ಕು–ರಿತು ಮುಂಜಾಗ್ರತೆಯನ್ನು ವಹಿಸಬೇಕು ಎಂದು ಆರೋಗ್ಯ ಶಿಕ್ಷಣ ನೀಡಲಾಯಿತು ಮುಂಬರುವ ಡಿಸೆಂಬರ್ 21ರಿಂದ 24ರವರೆಗೆ ನಡೆಯುವ ಪಲ್ಸ್ ಪೋಲಿಯೊ ಕಾರ್ಯಕ್ರಮ ದಲ್ಲಿ ಯಾವುದೇ 5 ವರ್ಷದ ಒಳಗಿನ ಮಕ್ಕಳು ಲಸಿಕೆಯಿಂದ ವಂಚಿತರಗದಂತೆ ಎಲ್ಲಾ ಮಕ್ಕಳಿಗೂ ಲಸಿಕೆಯ ಎರಡು ಹನಿ ಹಾಕಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ.

ಈ ಸಂದರ್ಭದಲ್ಲಿ ಶ್ರೀಮತಿ ಗೀತಾ ಹಿರೇಮಠ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು, ಶ್ರೀ ಪಕೀರಚಂದ್ ಖಿಡಿ. ಊಖಔ, ಶ್ರೀಮತಿ ಗೀತಾ ನರ್ಸಿಂಗ್ ಆಫೀಸರ್,ಶ್ರೀ ಶಂಬು LTO, ರಾಜಕುಮಾರ ಅಊಔ, ಜಯದುರ್ಗ, ಅಊಔ. ಶ್ರೀಮತಿ ಗಂಗಮ್ಮಕಊಅಔ,ಅಂಬಮ್ಮ ಕಊಅಔ, ಶ್ರೀಮತಿ ನಳಿನಿ ಕಊಅಔ.ಶ್ರೀಮತಿ ಶರಣಮ್ಮ ಊಖಔ, ಹಾಗೂ ಡಿ ದರ್ಜೆ ನೌಕರರು,ಆಶಾ ಕಾರ್ಯಕರ್ತೆಯರು, ಗರ್ಭಿಣಿಯರು ಸಾರ್ವಜನಿಕರು ಉಪಸ್ಥಿತರಿದ್ದರು.

## ಕಾರುಣ್ಯಾಶ್ರಮದ ಕೊಡಗು ಜಿಲ್ಲಾ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿ ಅಮೀನಾ ಆಯ್ಕೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕೊಡಗು ಜಿಲ್ಲೆಯಲ್ಲಿ ನಿರಂತರ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹಲವಾರು ಜನಪರ ಸಮಾಜಪರ ಕಾರ್ಯಗಳನ್ನು ಮಾಡುತ್ತಾ ಮನೆ ಮನೆ ಮಾತಾಗಿರುವ ಅವಿನಾ ಸ್ ಡ್ರೀಮ್ಸ್ ವರ್ಲ್ಡ್ ನ ಸಂಸ್ಥಾಪಕರಾದ ಅಮೀನಾ ಎಂ. ಎಂ. ಚನ್ನಂಕೊಲ್ಲಿ ಇವರನ್ನು ಸಿಂಧನೂರಿನ



ಕಾರುಣ್ಯಾಶ್ರಮದ ಕೊಡಗು ಜಿಲ್ಲಾ ಸಾರ್ವಜನಿಕ ಸಂಪರ್ಕಾಧಿಕಾರಿಗಳನ್ನಾಗಿ ಇಂದು ನೇಮಿಸಲಾಗಿದೆ.

ಎಂದು ಕಾರುಣ್ಯ ಸಂಸ್ಥೆಯ ಸಂಸ್ಥಾಪಕರಾದ ಅಮರಯ್ಯ ಸ್ವಾಮಿ ಹಿರೇಮಠ ಹರೇಟನೂರು ಇವರು ಪತ್ರಿಕೆಗೆ ಮಾಹಿತಿ ನೀಡಿದ್ದಾರೆ. ಇವರ ನಿರಂತರ ಸಮಾಜ ಸೇವೆ ಮತ್ತು ಅನಾಥರ ಬಗ್ಗೆ ಕಾಳಜಿ ವಹಿಸಿ ಆ ಭಾಗದಲ್ಲಿನ ಅನಾಥ–ರಿಗೆ ಕಾರುಣ್ಯ ಆಶ್ರಮದಲ್ಲಿ ಆಶ್ರಯ ಕೊಡಿಸಿ ಕಾರುಣ್ಯ ಆಶ್ರಮದ ಪ್ರತಿಯೊಂದು ಸೇವೆಯಲ್ಲಿ ಭಾಗಿಯಾಗುತ್ತೇನೆ ಎನ್ನುವ ಪ್ರಾಮಾಣಿಕ ನುಡಿಗಳನ್ನಾಧರಿಸಿ ಅವರನ್ನು ಕೊಡಗು ಜಿಲ್ಲೆಯ ಸಾರ್ವಜನಿಕ ಸಂಪರ್ಕಾಧಿಕಾ–ರಿಗಳನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ ಎಂದು ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ಅವರು ಪತ್ರಿಕಾ ಬಳಗಕ್ಕೆ ಮಾಹಿತಿ ನೀಡಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು ಡಿಸೆಂಬರ್ 09 (ಕರ್ನಾಟಕ ವಾರ್ತೆ): ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಜಿಲ್ಲೆಯ 08 ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಂ–ುರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು, ಇಲಾಖೆಯ ವೆಬ್‌ಸೈಟ್ ವಿಳಾಸÀ:https://karnemakaone.kar.nic.in/abcd/ ನಲ್ಲಿ ಜನವರಿ 7 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ರಾಯಚೂರು, ಗಿಲ್ಲೇಸುಗೂರು, ಮಾನವಿ, ಸಿರವಾರ, ಸಿಂಧನೂರು, ತುರವಿಹಾಳ ಲಿಂಗಸುಗೂರು ಹಾಗೂ ದೇವದುರ್ಗ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯವನ್ನು ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪಲ್ಸ್ ಪೋಲಿಯೋ ಯಶಸ್ವಿಗೊಳಿಸಿ ಝುಳಕಿಮಠ ಕರೆ



❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಡಿ 09 ತಾಲೂಕಿನಲ್ಲಿ ಡಿಸೆಂಬರ 21ರ ಭಾನುವಾರ ದಂದು ನಡೆಯುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಶೇಕಡ 100 ರಷ್ಟು ಗುರಿ ಸಾಧಿಸಲು ಗ್ರೇಡ್ 3 ತಹಸೀಲ್ದಾರ್ ಬಸವರಾಜ ಝುಳಕಿಮಠ ಅಧಿಕಾರಿಗಳಿಗೆ ಕರೆ ನೀಡಿದ್ದಾರೆ.


ಇಂದು ನಡೆದ ತಾಲೂಕ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಂಬಂಧಪಟ್ಟ ಎಲ್ಲಾ ಇಲಾಖೆ ಅಧಿಕಾರಿಗಳು ಸಿಬ್ಬಂದಿಯವರು ಈ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಜನ–ರಿಗೆ ಸರಿಯಾದ ಮಾಹಿತಿ ನೀಡುವುದು ಮತ್ತು ಹುಟ್ಟಿದ ಮಕ್ಕಳಿಂದ ಹಿಡಿದು 5 ವರ್ಷದೊಳಗಿನ 52.195 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಿರುವ ಆರೋಗ್ಯ ಇಲಾಖೆಗೆ ಸಂಪೂರ್ಣವಾಗಿ ಸಹಕರಿಸಲು ತಿಳಿಸಿದರು. ನಂತರ ಮಾತನಾಡಿದ ತಾಲೂಕು ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿ ಉಮೇಶ್ ಕಳೆದ 12 ವರ್ಷ ದಿಂದ ಭಾರತ ದೇಶದಲ್ಲಿ ಪೋಲಿಯೋ ಪ್ರಕರಣ ಕಂಡುಬಂದಿಲ್ಲ ವಾದರೂ ನೆರೆ ರಾಷ್ಟ್ರಗಳಲ್ಲಿ ಇನ್ನೂ ವರದಿಯಾಗುತ್ತಿರುವ ಕಾರಣ ಪಲ್ಸ್ ಪೋಲಿಯೋ ಮುಂದುವ–ರಿದಿದೆ ಸಮುದಾಯದಲ್ಲಿ ಎಲ್ಲ ಅರ್ಹ ಮಕ್ಕಳಿಗೆ ಲಸಿಕೆ ಹಾಕಿಸಲು ಸಂಘ ಸಂಸ್ಥೆಗಳು ಸಾರ್ವಜನಿಕರು ಕೈಜೋಡಿಸುವಂತೆ ಕೋರಿದರು.

ತಾಲೂಕ ಆರೋಗ್ಯಾಧಿಕಾರಿ ಡಾ: ಅಮರೇಶ ಪಾಟೀಲ ಆರೋಗ್ಯ ಇಲಾಖೆಯ ಕ್ರಿಯಾಯೋಜನೆ ಮಾಹಿತಿ ನೀಡಿ ಒಟ್ಟು 240 ತಂಡಗಳು 480 ಕಾರ್ಯಕರ್ತರು ಒಟ್ಟು 52200 ಮಕ್ಕಳಿಗೆ ಲಸಿಕೆ ಹಾಕುವರು. 85432 ಮನೆಗಳ ಭೇಟಿ. ದೊಡ್ಡಿ ತಾಂಡಾ. ಅಲೆಮಾರಿ ಜನವಸತಿ ತಾಣಗಳು.ಬಸ್ ನಿಲ್ದಾಣಗಳಲ್ಲಿಯೂ ಪೋಲಿಯೋ ತಂಡ ಕಾರ್ಯನಿರ್ವಹಿಸುತ್ತವೆ. ಇಲಾಖೆಯ 48 ಮೇಲ್ವಿಚಾರಕರು ಭಾಗವಹಿಸುವರು ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಅಧಿಕಾರಿ ನಾಗರತ್ನ. ಪುರಸಭೆ ಅಧಿಕಾರಿಗಳಾದ ನಟರಾಜ್. ಜಗನ್ನಾಥ. ಆರಿಫಾ.ಗದ್ದೆಪ್ಪ.ಜೆಸ್ಕಾಂ ಅಧಿಕಾರಿ ಬೆನ್ನಪ್ಪ. ಶಿಕ್ಷಣ ಇಲಾಖೆಯ ಮಹಾಂತೇಶ. ಸಾರಿಗೆ ಇಲಾಖೆಯ ಮಹಾರುದ್ರಪ್ಪ ಆರೋಗ್ಯ ಇಲಾಖೆಯ ಡಾ: ಹನುಮಂತರಾಯ ತಳ್ಳಳ್ಳಿ. ಡಾ: ಶಿವನಾಗ. ಡಾ: ಅಭಿಜಿತ್ ,ಡಾ: ನಿರ್ಮಲಾ ಪಾಟೀಲ್, ಡಾ: ರವಿಕಿರಣ,ಡಾ: ಇಕ್ಬಾಲ್ ,ಡಾ: ಸೂಗೂರೇಶ. ಅರ್ಜುನ್. ಪ್ರಾಣೇಶ್. ರಾಘವೇಂದ್ರ. ಗುರು ಪ್ರಸಾದ್. ಶಿವಲೀಲಾ ಮೇಟಿ. ಪದ್ಮಾವತಿ ನಾಯಕ್. ಬಸವಲಿಂಗ. ವಾಸೀಂ ರೆಹಮಾನ. ಇತರರು ಸಭೆಯಲ್ಲಿ ಭಾಗವಹಿಸಿದ್ದರು.

## ಶ್ರೀ ಮಾರಿಕಾಂಬೆ ದೇವಿಯ ವೈಭವದ ಉಚ್ಚಾಯ ಮಹೋತ್ಸವ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಕೋನಾಪುರ ಪೇಟೆಯಲ್ಲಿನ ಪಟ್ಟಣದದೇವತೆ ಶ್ರೀ ಮಾರಿಕಾಂಬೆ ದೇವಿಯ ದೇವಸ್ಥಾನದಲ್ಲಿ ಜಾತ್ರಮಹೋತ್ಸಾವ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು ಬೆಳಿಗ್ಗೆ ಶ್ರೀ ಮಾರಿಕಾಂಬೆ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಉಡಿತುಂಬುವ ಕಾರ್ಯಕ್ರಮ ನಡೆಯಿತು.



ಸಂಜೆ ಪಲ್ಲಕ್ಕಿ ಉತ್ಸವ ಹಾಗೂ ಉತ್ಸವ ಮೂರ್ತಿಯನ್ನು ಉಚ್ಚಾಯದಲ್ಲಿ ಕೂಡಿಸಿ ಡೋಳ್ಳು ಮತ್ತು ಕೋಲಾಟ ಸೇರಿದಂತೆ ವಿವಿಧ ಜನಪದ ಕಲಾ ತಂಡಗಳೊಂದಿಗೆ ಸಾವಿರಾರು ಭಕ್ತ–ರಿಂದ ಉಚ್ಚಾಯ ಮಹೋತ್ಸಾವ ನಡೆಯಿತು. ಶಂಕ್ರಯ್ಯಸ್ವಾಮಿ, ಸುವರ್ಣಗಿರಿ ಮಠ, ರಾಜ್ಯ ಕುರುಬರ ಸಂಘದ ರಾಜ್ಯಾಧ್ಯಕ್ಷರಾದ ಎಂ.ಈರಣ್ಣ, ಜೆಡಿಎಸ್ ರಾಜ್ಯ ಯುವ ಘಟಕದ ರಾಜ್ಯ ಉಪಾಧ್ಯಕ್ಷರಾದ ರಾಜಾ ರಾಮಚಂದ್ರನಾಯಕ, ಕೆ.ಬಸವಂತಪ್ಪ,ರಾಮಕೃಷ್ಣ.ಡಿ, ಗುರುಸಿದ್ದಪ್ಪ ಕಣ್ಣೂರು,ಪುರಸಭೆ ಸದಸ್ಯರಾದ ರೇಣುಕರೆಡ್ಡಿ ದೇವಸ್ಥಾನದ ಅಧ್ಯಕ್ಷರಾದ ಶ್ರೀನಿವಾಸ,ಬಿ, ಖಜಾಂಚಿ,ಉಪಾಧ್ಯಕ್ಷ ನರಸಿಂಹ .ಹೆಚ್,ಹುಸೇನಪ್ಪ ಜಗ್ಲಿ, ಪಿ.,ಆನೀಲ್ ಕುಮಾರ ಜಯಪ್ರಕಾಶ, ಪ್ರವೀಣ ಕುಮಾರ, ಉಮೇಶರೆಡ್ಡಿ,ಕಮಟ್ಟೆ ಗೌಡ, ಹೆಚ್.ನರಸಿಂಹ, ಯಂಕಣ್ಣ ಮಾಂತರ್,ರವಿಕುಮಾರ.ಕೆ,ನಾರಾಯಣಸ್ವಾಮಿ,ಪಿ.ರವಿಕುಮಾರ, ವಿಜಯಕುಮಾರ ಹೆಚ್, ಅಮರೇಶ ಮೇಟಿ ಭೋಗವತಿನಾಗಪ್ಪ ಕಬ್ಬೇರ ರಮೇಶ, ಸೇರಿದಂತೆ ಇನ್ನಿತರರು ಇದ್ದರು.

## ಶಿಕ್ಷಣ ಇಲಾಖೆಯಿಂದ ನಗರ ವಲಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಕಾಕತೀಯ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಶಿಕ್ಷಣ ಇಲಾಖೆ ಹಾಗೂ ಕಾಕತೀಯ ಶಿಕ್ಷಣ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಡೆದ 2025–26 ನೇ ಸಾಲಿನ ಮಾನವಿ ನಗರ ವಲಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮಕ್ಕೆ ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಮಾರುತಿ ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ ಶಾಲೆಯ ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಹೊರಬರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ಶಿಕ್ಷಣ ಇಲಾಖೆಯ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು .ವಲಯ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದಲ್ಲಿ ಉತ್ತಮವಾದ



ವೇದಿಕೆಯನ್ನು ಕಲ್ಪಿಸುತ್ತಿದೆ ಅದ್ದರಿಂದ ಶಾಲೆಯ ಗುರುಗಳು ತಮ್ಮ ವಿದ್ಯಾರ್ಥಿಯಲ್ಲಿನ ಕೌಶಲ್ಯಾವನ್ನು ಗುರುತಿಸಿ ಅವರಿಗೆ ಸರಿಯಾದ ಮಾರ್ಗದರ್ಶನವನ್ನು ನೀಡಿದಲ್ಲಿ ವಿದ್ಯಾರ್ಥಿಗಳು ಉತ್ತಮವಾದ ಸಾಧನೆಯನ್ನು ತೊರುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಮಾನ್ವಿ ವಲಯ ಮಟ್ಟದ ವಿವಿಧ ಶಾಲೆಯ ವಿದ್ಯಾರ್ಥಿಗಳು ಭಾರತ ನಾಟ್ಯ. ನೃತ್ಯ,ಜನಪದ ನೃತ್ಯ,ಗಾಯಮ ,ಮಣ್ಣಿನಿಂದ ಆಕೃತಿಗಳ ರಚನೆ, ಚಿತ್ರಕಲೆ, ಭಾಷಣ, ರಂಗೋಲಿ ಸೇ–ರಿದಂತೆ ವಿವಿಧ ವಿಭಾಗಗಳಲ್ಲಿ ತಮ್ಮ ಪ್ರತಿಭೆಯನ್ನು ತೊರಿ ಗಮನ ಸೇಳೆದರು.

ಕಾರ್ಯಕ್ರಮದಲ್ಲಿ ಪ್ರಾ.ಶಾ.ಶಿಕ್ಷಕರ ಸಂಘದ ತಾ.ಅಧ್ಯಕ್ಷರಾದ ಸಂಗಮೇಶ ಮುಧೋಳ್, ಸರಕಾರಿ ನೌಕರರ ಸಂಘದ ತಾ.ಅಧ್ಯಕ್ಷರಾದ ಸುರೇಶ ಕುರ್ಡಿ, ಪ್ರೌಢಶಾಲಾ ಶಿಕ್ಷಕರ ಸಂಘದ ತಾ.ಅಧ್ಯಕ್ಷರಾದ ಅಶೋಕ ಕುಮಾರ, ಕಾಕತೀಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸುಂದರ ಶ್ರೀನಿವಾಸ,ಮುಖ್ಯ ಗುರುಗಳಾದ ವೀರಭದ್ರಗೌಡ, ನಿರ್ದೇಶಕರಾದ ಸೈಯಾದ್ ಮತವಾಲ್, ಹಂಪಣ್ಣ ಚಂಡೂರ್,ಸಿ. ಆರ್.ಪಿ.ಗಳಾದ ಹಾಲೇಶ್,ಸೋಮಶೇಖರ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು. ಮಾನ್ವಿ: ಪಟ್ಟಣದ ಕಾಕತೀಯ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ತಾಲೂಕು ದೈಹಿಕ ಶಿಕ್ಷಣಾಧಿಕಾರಿ ಮಾರುತಿ ಉದ್ಘಾಟಿಸಿದರು.

## ನೇಮಕಾತಿ ಪ್ರಕಟಣೆ

DECEMBER 10 ಕೊಪ್ಪಳ ಜಿಲ್ಲಾ ನ್ಯಾಯಾಲಯ ನೇಮಕಾತಿ 2025 2 ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಕೊಪ್ಪಳ ಜಿಲ್ಲಾ ನ್ಯಾಯಾಲಯ ನೇಮಕಾತಿ 2025: 2 ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕೊಪ್ಪಳ ಜಿಲ್ಲಾ ನ್ಯಾಯಾಲಯದ ಅಧಿಕೃತ ಅಧಿಸೂಚನೆ ಡಿಸೆಂಬರ್ 2025 ರ ಮೂಲಕ ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಕೊಪ್ಪಳ ಇ-ಕೋರ್ಟ್ ಅರ್ಜಿಗಳನ್ನು ಆಹ್ವಾನಿಸಿದೆ. ಕೊಪ್ಪಳ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 15-ಡಿಸೆಂಬರ್-2025 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. Official Website: koppal.dcourts.gov.in ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-ಡಿಸೆಂಬರ್-2025

## ಶಿಕ್ಷಕರ ಬೋಧನೆಯ ಕ್ರಿಯಾಶೀಲತೆಗಾಗಿ ಸಹಪಠ್ಯ ಚಟುವಟಿಕೆ ಆಯೋಜನೆ: ಕೆ.ಡಿ. ಬಡಿಗೇರ್

ನೈಜ್ಯ ದೆಸೆ ನ್ಯೂಸ್



**ರಾಯಚೂರು: ಡಿ.8: ಬೋಧನೆಯಲ್ಲಿನ ಕ್ರಿಯಾಶೀಲತೆ ಹೆಚ್ಚಿಸಿ ಸೃಜನಶೀಲತೆ ವಿಸ್ತರಿಸಲು ಹೆಚ್ಚೆಚ್ಚು ಸಹಪಠ್ಯಚಟುವಟಿಕೆಗಳಲ್ಲಿ ಶಿಕ್ಷಕರು ಪಾಲ್ಗೊಳ್ಳಬೇಕು ಎಂದು ಕೆ. ಡಿ. ಬಡಿಗೇರ್ ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ರಾಯಚೂರು ಅವರು ತಿಳಿಸಿದರು. ಅವರು ಸೋಮವಾರದಂದು ರಾಯಚೂರು ನಗರದ ಕೆಡಬ್ಲ್ಯು ಟಿ ಶಾಲೆಯಲ್ಲಿ ಶಿಕ್ಷಕರ ಕಲ್ಯಾಣ ನಿಧಿಯಿಂದ ರಾಯಚೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಶಿಕ್ಷಕರ ಸಹಪಠ್ಯಚಟುವಟಿಕೆ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.**

ಶಿಕ್ಷಕರು ವಿವಿಧ ಸಾಂಸ್ಕೃತಿಕ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಒತ್ತಡ ನಿವಾರಣೆಯಾಗಿ ಜ್ಞಾನವು ವಿಸ್ತಾರಗೊಳ್ಳುವುದು. ಹೊಸ ಕೌಶಲಗಳಿಕೆ, ಬೋಧನೆಯಲ್ಲಿ ಪರಿಣಾಮಕಾರಿತ್ವವನ್ನು ಗಳಿಸಿಕೊಳ್ಳಬಹುದಾಗಿದೆ. ಆ ಮೂಲಕ ವಿದ್ಯಾರ್ಥಿಗಳಿಗೆ ಅನುಕರಣೆ ಮಾಡಲು ಮಾದರಿಯಾಗಬಹುದಾಗಿದೆ. ಜೀವನ ಮತ್ತು ವೃತ್ತಿಯಲ್ಲಿನ ಉತ್ಸಾಹ ವೃದ್ಧಿಯು ಅಗತ್ಯವಿದೆ ಎಂದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಿ ಮಾತನಾಡಿ, ನಿಮ್ಮನ್ನು ನೀವು ಕ್ರಿಯಾಶೀಲರನ್ನಾಗಿ ಮಾಡಿಕೊಳ್ಳಲು ತಮ್ಮಲ್ಲಿಯ ಪ್ರತಿಭೆಯನ್ನು ಪ್ರದರ್ಶಿಸಲು ಇದೊಂದು ಉತ್ತಮ ವೇದಿಕೆಯಾಗಿದೆ.

ಇದರಿಂದ ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳುವುದರೊಂದಿಗೆ ಮಕ್ಕಳ ಕಲಿಕೆಗೆ ಪೂರಕವಾಗುಲಿದೆ ಎಂದರು. ವಿವಿಧ ಸಂಘದ ಪದಾಧಿಕಾರಿಗಳು ಕೈಜೋಡಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಂದು ಹೇಳಿದರು. ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿ ಯುನುಸ್ ಬಾಬು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತರೆ ಶಿಕ್ಷಕರೊಂದಿಗೆ ಬೆರೆತು ಅನುಭವ ಹಂಚಿಕೊಳ್ಳಲು, ವೃತ್ತಿಜೀವನ ಮತ್ತು ವೈಯಕ್ತಿಕ ಬೆಳವಣಿಗೆಗೆ ಸಹಪಠ್ಯಚಟುವಟಿಕೆ ಸಹಕಾರಿಯಾಗಿವೆ. ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು, ಬೋಧನೆಯಲ್ಲಿ ರಚನಾತ್ಮಕವಾದ ವಿವಿಧತೆಯನ್ನು ಕಾಯ್ದುಕೊಳ್ಳಲು ಅನುಕೂಲವಾಗುತ್ತದೆ ಎಂದರು.

ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷರಾದ ಮೋಯಿನುಲ್ ಹಕ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಲ್ಲೇಶ ನಾಯಕ ಕಾರ್ಯಕ್ರಮದ ಕುರಿತು ಮಾತನಾಡಿದರು.

ಕಾರ್ಯಕ್ರಮದ ಕುರಿತು ಕಾರ್ಯಕ್ರಮದ ನೋಡಲ್ ಅಧಿಕಾರಿಯಾದ ರಾಮಕೃಷ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಕರ ಸಹಪಠ್ಯ ಚಟುವಟಿಕೆಗೆ ವೇದಿಕೆಯನ್ನು ಕಲ್ಪಿಸಿದ್ದು ಎಲ್ಲ ಶಿಕ್ಷಕರು ಇದರ ಸದುಪಯೋಗಪಡಿಸಿಕೊಂಡು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲ ಸಂಘದ ಪದಾಧಿಕಾರಿಗಳನ್ನು ವಿನಂತಿಸಿಕೊಂಡರು.

ಕಾರ್ಯಕ್ರಮವನ್ನು ಪಶ್ಚಿಮ ವಲಯ ಸಿಆರ್‌ಪಿ ವೀರೇಶ್ ಟಿ ಅವರು ನಿರೂಪಿಸಿದರು. ವೇದಿಕೆ ಮೇಲೆ ಉಪಸ್ಥಿತರಿದ್ದ ಎಲ್ಲ ಗಣ್ಯಮಾನ್ಯರನ್ನು ರಾಯಚೂರು ದಕ್ಷಿಣ ವಲಯದ ಸಮೂಹ ಸಂಪನ್ಮೂಲ ವ್ಯಕ್ತಿ ರಾವುತರಾವ್ ಬರೂರ ಅವರು ಸ್ವಾಗತಿಸಿದರು. ರಾಯಚೂರು ಕೇಂದ್ರ ವಲಯದ ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಶಿವುಕುಮಾರ ವಂದಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ರಂಗಸ್ವಾಮಿ, ತಾಲೂಕು ದೈಹಿಕ ವಿಷಯ ಪರೀಕ್ಷಕರಾದ ಪರಶುರಾಮ್ ಹುಜರತಿ, ವಿವಿಧ ಶಿಕ್ಷಕ ಸಂಘದ ಅಧ್ಯಕ್ಷರುಗಳಾದ ಯಂಕಪ್ಪ ಪಿರಂಗಿ, ದೇವೇಂದ್ರಪ್ಪ, ವಿನೋದ ಕುಮಾರ, ಗೂಳಪ್ಪ, ರೆಹಮಾನ್, ಆನಂದ, ಶಂಕ್ರಪ್ಪ, ಮಹಮ್ಮದ್ ಇಸ್ಮೈಲ್, ಧನಲಕ್ಷ್ಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ನಂತರದಲ್ಲಿ ಶಿಕ್ಷಕರಿಗಾಗಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗಗಳಲ್ಲಿ ಪ್ರತ್ಯೇಕವಾಗಿ ಭಕ್ತಿಗೀತೆಗಾಯನ, ಸಾಮಾನ್ಯ ಜ್ಞಾನ ಮತ್ತು ವಿಜ್ಞಾನ ರಸಪ್ರಶ್ನೆ, ಸ್ಥಳದಲ್ಲಿಯೇ ಚಿತ್ರಕಲೆ ಮತ್ತು ಪಾಠೋಪಕರಣಗಳ ತಯಾರಿಕೆ, ಪ್ರಬಂಧ, ಆಶುಭಾಷಣ ಸ್ಪರ್ಧೆ ನಡೆದವು. ವಿಜೇತರಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನವನ್ನು ವಿತರಿಸಲಾಯಿತು.

## 52 ಕೋಟಿ ವೆಚ್ಚದಲ್ಲಿ 33 ಹೊಸ ಕ್ರಸ್ಟ್ ಗೇಟ್ ಗಳ ಅಳವಡಿಕೆ ಕಾರ್ಯಕ್ಕೆ ಚಾಲನೆ ರವಿ ಭೋಸರಾಜು

ನೈಜ್ಯ ದೆಸೆ ನ್ಯೂಸ್



ತುಂಗಭದ್ರ ಜಲಾಶಯವನ್ನು ನಂಬಿರುವ ಅನ್ನದಾತರ ಹಿತಕಾಪಾಡಲು ನಮ್ಮ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ. 52 ಕೋಟಿ ವೆಚ್ಚದಲ್ಲಿ 33 ಹೊಸ ಕ್ರಸ್ಟ್ ಗೇಟ್ ಗಳ ಅಳವಡಿಸುವ ಕಾರ್ಯಕ್ಕೆ ಚಾಲನೆ ನೀಡುವ ಮೂಲಕ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ಇದ್ದ ಆತಂಕ ನಿವಾರಣೆಗೆ ಮೊದಲ ಆದ್ಯತೆ ನೀಡಿದೆ. ತುಂಗಭದ್ರ ಜಲಾಶಯ ಕಲ್ಯಾಣ ಕರ್ನಾಟಕ ಜನರ ಜೀವನಾಡಿ. ಈ ಭಾಗದ ರೈತರ ರಕ್ಷಣೆ ನಮ್ಮ ಹೊಣೆ ಎಂದೇ ನಮ್ಮ ಕಾಂಗ್ರೆಸ್ ಸರ್ಕಾರ ನಂಬಿ, ಕಾರ್ಯಪ್ರವೃತ್ತವಾಗಿದೆ.

## ಪ್ರಾ.ಕೃ.ಪ.ಸ.ಸಂಘ ನಿ, ಬಿಜೆಪಿ ವಶಕ್ಕೆ , ಬಿಜೆಪಿ 7- ಕಾಂಗ್ರೇಸ್ - 2 , ಜೆಡಿಎಸ್ 2

ನೈಜ್ಯ ದೆಸೆ ನ್ಯೂಸ್

**ಸಿರವಾರ: ಸ್ಥಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.ದ ಮುಂದಿನ 5 ವರ್ಷಕ್ಕೆ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗಾಗಿ ಜರುಗಿದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ 7 ಸದಸ್ಯರು ಗೆದ್ದರೆ, ಕಾಂಗ್ರೆಸ್ ಹಾಗೂ ಜೆಡಿಎಸ್ ತಲಾ 2 ಸ್ಥಾನಗಳು ಗೆಲುವಲ್ಲಿಗೆ ತೃಪ್ತಿಯಾಗಬೇಕಾದರೆ, ಈಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ ಕಾಂಗ್ರೆಸ್ ಗೆ ಭಾರಿ ಮುಖಭಂಗವಾಗಿದೆ.**



ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆಗಾಗಿ ಭಾನುವಾರ 07-12-2025 ಬೆಳಗ್ಗ9ಗಂಟೆಯಿಂದ ಪ್ರಾರಂಭವಾಗಿ ಮದ್ಯಾಹ್ನ-ಗಂಟೆಗೆ ಮುಕ್ತಾಯವಾಯಿತು. ಸಾಲಗಾರರ ಕ್ಷೇತ್ರದಲ್ಲಿ 11 ಸ್ಥಾನಗಳಿಗೆ 718 ಮತದಾರರಲ್ಲಿ 662 ಮತ ಚಲಾವಣೆ ಮಾಡಿದರು.ನಂತರ ಜರುಗಿದ ಮತ ಏಣಿಕೆಯಲ್ಲಿ ಸುಮಾರು 119 ಕೂ ಅದಿಕ ಮತಗಳು ಅಸಿಂಧುವಾಗಿದವು. ಗೆದ್ದವರ ವಿವರ:- ಸಾಮನ್ಯ ಕ್ಷೇತ್ರ ಶಿವರಾಜಗೌಡ ತಂದೆ ಬಸವರಾಜ(328).ಎನ್.ಬಸ್ಸಪ್ಪ ಗೌಡ ತಂದೆ ಯಂಕಣ್ಣ ನಂದ-ರೆಡ್ಡಿ(309), ದೇವಪುತ್ರ ತಂದೆ ಆನಂದಪ್ಪ(298), ಮಹ್ಮದವಾಹೀದ್ ತಂದೆ/ಇಮಾಮುದ್ದೀನ್ ಮುಲ್ಲಾರ್(288), ಮಲ್ಲಪ್ಪ(278), ಗ್ಯಾನಪ್ಪತಂದೆ ಸುಜಪ್ಪ (ಪರಿಶಿಷ್ಟ ಜಾತಿ 289), ಚನ್ನಬಸವ ತಂದೆಶಿವಲಿಂಗಪ್ಪಚನ್ನೂರು(ಪರಿಶಿಷ್ಟ ಅಡಿವೇಪ್ಪದೊಡ್ಡಮನಿತಂದೆ ದೊಡ್ಡ ಪಂಗಡ 394), ಆಂಜಿನೇಯ್ಯ ತಂದೆ ದುರುಗಪ್ಪ,(274) ಹಿಂದುಳಿದ ವರ್ಗ ಎ), ಪಂಪಾಪತಿ ನೀಲಗಲ್ ತಂದೆ ಶಿದ್ರಾಮಪ್ಪ ನೀಲಗಲ್(ಹಿಂದುಳಿದ ವರ್ಗಜಿ 344), ಸಿದ್ದಮ್ಮಗಂಡ ಕಲಬಸಯ್ಯ (ಮಹಿಳೆ 256), ಸಿದ್ದಮ್ಮ ಗಂಡ ರಂಗಯ್ಯ ಸೂರಿ(ಮಹಿಳೆ228) ಸಾಲಗಾರರಲ್ಲದಕ್ಷೇತ್ರಕ್ಕೆ.ಎಮ್.ನಾಗರಾಜ ಗೌಡ ತಂದೆ ಎಂ.ರುದ್ರಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಎಂದು ಚುನಾವಣೆ ಅಧಿಕಾರಿ ಘೋಷಣೆ ಮಾಡಿದ್ದಾರೆ. 4 ನೇ ಅವಧಿಗೆ ಮರು ಆಯ್ಕೆ :- ಕಳೆದ 3 ಅವದಿಗಳಿಂದ ಚಿನ್ನೂರು ಚನ್ನಪ್ಪ, ಬಸ್ಸಪ್ಪಗೌಡನಂದರೇಡ್ಡಿ,ದೇವಪುತ್ರಪ್ಪ, ಅಯ್ಯಪ್ಪ, ಆಯ್ಕೆಯಾಗಿದ್ದಾರೆ. ಆಂಜನೇಯ್ಯ ಬಿಚ್ಚಾಲಿ ಎರಡನೆ ಬಾರಿಗೆ ಮತ್ತೆಗೆದ್ದಾರೆ. ಸಂಭ್ರಮಾಚರಣೆ :- ಫಲಿತಾಂಶ ಹೊರಬಿಳುತ್ತಿದ್ದಂತೆ ವಿಎಸ್ ಎಸ್ ಎನ್ ಮುಂಭಾಗದಲ್ಲಿ ಮುಖಂಡರು ಕಾರ್ಯಕರ್ತರು ಪಟಾಕಿ ಸಿಡಿಸಿ ಗುಲಾಲು ಎರಚಿ ಸಿಹಿ ತಿನ್ನಿಸಿ ಸಂಭ್ರಮಾಚರಣೆ ಮಾಡಿದರು.

## ಹಲವಾರು ಪದಕಗಳನ್ನು ಗೆದ್ದ ಬ್ರಿಲಿಯಂಟ್ ಶಾಲೆಯ ವಿದ್ಯಾರ್ಥಿಗಳು



ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಬಳ್ಳಾರಿಯಲ್ಲಿ ನಡೆದಿದ್ದ ಕರಾಟೆ ಚಾಂಪಿಯನ್ ಶಿಪ್ ನಲ್ಲಿ ಬ್ರಿಲಿಯಂಟ್ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಮೈಲೇಶ್ವರದ ವಿದ್ಯಾರ್ಥಿಗಳು ಭಾಗವಹಿಸಿ ಹಲವಾರು ಪದಕಗಳನ್ನು ತಮ್ಮ ತೆಕ್ಕೆಗೆ ಪಡೆದುಕೊಂಡರು.**

ಈ ಚಾಂಪಿಯನ್ ಶಿಪ್ ನಲ್ಲಿ ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ಪದಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಕರಾಟೆ ತರಬೇತುದಾರರಾದ ಶ್ರೀ ಲಕ್ಷ್ಮಣ ಪಿರಂಗಿ ಸರ್ ಅವರಿಗೆ ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಮತ್ತು ಬ್ರಿಲಿಯಂಟ್ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಸಮಸ್ತ ಸಿಬ್ಬಂದಿ ವರ್ಗದವರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ. ಒಟ್ಟು - ಚಿನ್ನ 08 , ಬೆಳ್ಳಿ10 , ಕಂಚು13 ಕರಾಟೆ ಚಾಂಪಿಯನ್ ಶಿಪ್ ನಲ್ಲಿ ವಿದ್ಯಾರ್ಥಿಗಳು ಪದಕಗಳನ್ನು ಪಡೆದುಕೊಂಡಿರುತ್ತಾರೆ.

ಚಿನ್ನ ಪಡೆದ ವಿದ್ಯಾರ್ಥಿಗಳು :
1)ಕಾರ್ತಿಕ್ ಐಮಾಪುರ್- 14ವರ್ಷ
2)ಸಂದೀಪ್ ಬಬಲೇಶ್ವರ-13ವರ್ಷ
3)ಭಾರತೇಶ್ ಬಂಡಿ-10ವರ್ಷ
4)ರೇವಣಸಿದ್ಧ ಅಖಂಡಳ್ಳಿ -12ವರ್ಷ
5)ಕಲ್ಮೇಶ ಬೇವೂರ್ -13ವರ್ಷ, 45ಕೆಜಿ ವರ್ಗ
6)ಗಣೇಶ್ ಡೊಳ್ಳಿನ -14ವರ್ಷ, 45ಕೆಜಿ ವರ್ಗ
7)ಕಾರ್ತಿಕ್ ಚಲವಾದಿ -12ವರ್ಷ,32ಕೆಜಿ, ವರ್ಗ
8)ಅಸಿಶ್ ಲಮಾಣಿ -13ವರ್ಷ, 35ಕೆಜಿ ವರ್ಗ

ಬೆಳ್ಳಿ ಪದಕ ಪಡೆದ ವಿದ್ಯಾರ್ಥಿಗಳು
1)ಮಲ್ಲಿಕಾರ್ಜುನ ಮಠಪತಿ -12ವರ್ಷ, 34ಕೆಜಿ ವರ್ಗ
2ಭೀಮರಾಯ ಬೂದಿಹಾಳ್ -14ವರ್ಷ 29ಕೆಜಿ, ವರ್ಗ
3)ಮನ್ವಿತ್ ಎಮ್ ಎಚ್ -10ವರ್ಷ 28ಕೆಜಿ, ವರ್ಗ
4)ನಿರಂಜನ್ ಅರಕೇರಿ -12ವರ್ಷ, 26ಕೆಜಿ ವರ್ಗ
5)ಪುರುಷೋತ್ತಮ್ ಬಿ -10ವರ್ಷ 21ಕೆಜಿ ವರ್ಗ
6)ದೇವರಾಜ್ ಮಲಿಬಿರಾದಾರ್ -14ವರ್ಷ, 33ಕೆಜಿ ವರ್ಗ
7)ಸೃಜನ್ ನಡುವಿನಮನಿ -14ವರ್ಷ, 45ಕೆಜಿ ವರ್ಗ
8)ನಿಖಿಲಕುಮಾರ್ ತೇಕರಾಳ -13ವರ್ಷ, 43ಕೆಜಿ ವರ್ಗ
9)ಶರನಗೌಡ ಬಬಲಾದಿ -13ವರ್ಷ, 45ಕೆಜಿ ವರ್ಗ
10)ಕಲ್ಯಾಣಕುಮಾರ್ ಬಗಲಿ -12ವರ್ಷ, 32ಕೆಜಿ ವರ್ಗ

ಕಂಚು ಪಡೆದ ವಿದ್ಯಾರ್ಥಿಗಳು
1)ಮಹೇಶ್ ಗಿಂಡಿ -10ವರ್ಷ, 25ಕೆಜಿ ವರ್ಗ
2)ಮಂಟಯ್ಯ ಕಾಲಮಠ್ -14ವರ್ಷ, 34ಕೆಜಿ ವರ್ಗ
3)ಪೃಥ್ವಿ ಚವಾಣ-12ವರ್ಷ, 40ಕೆಜಿ ವರ್ಗ
4)ಸಿದ್ದರಾಮಪ್ಪಗೌಡ ಪಾಟೀಲ್ -13ವರ್ಷ, 30ಕೆಜಿ ವರ್ಗ
5)ನಿಂಗನಗೌಡ ಬಿರಾದಾರ -13ವರ್ಷ, 33ಕೆಜಿ ವರ್ಗ
6)ಚನ್ನಬಸ್ಸು ಬಿರಾದಾರ-14ವರ್ಷ, 33ಕೆಜಿ ವರ್ಗ
7)ಜೀವಾನ್ ಪೋಶೆಟ್ಟಿ -14ವರ್ಷ, 41ಕೆಜಿ ವರ್ಗ
8)ಸಿದ್ದನಗೌಡ ಹಳ್ಳೂರ-12ವರ್ಷ, 35ಕೆಜಿ ವರ್ಗ
9)ಶ್ರೀಶೈಲಾಗೌಡ ವಿ. ಪಾಟೀಲ -13ವರ್ಷ, 32ಕೆಜಿ, ವರ್ಗ
10)ಶಶಾಂಕ್. ಕ -14ವರ್ಷ, 45ಕೆಜಿ ವರ್ಗ
11)ನಂದೀಶ್ ಗಬ್ಬುರ್ -12ವರ್ಷ, 32ಕೆಜಿವರ್ಗ
12)ಯಶ್ ಚವಾಣ -12ವರ್ಷ, 45ಕೆಜಿ ವರ್ಗ
13)ವಿನೋದ್ ಬಿರಾದಾರ- 14ವರ್ಷ, 32ಕೆಜಿ ವರ್ಗ

## ಪಿಎಮ್ ಎಸ್ ಎಮ್ ಎ ಶಿಬಿರದಲ್ಲಿ ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಮಕ್ಕಳಲ್ಲಿ ಬೆಳವಣಿಗೆಗೆ ಅಡ್ಡಿಯಾಗುವ ಅಪೌಷ್ಟಿಕತೆಯ ನಿವಾರಣೆಗಾಗಿ 'ಪೌಷ್ಟಿಕ ಪುನಶ್ಚೇತನ ಕೇಂದ್ರ (ಎನ್‌ಆರ್‌ಸಿ)' ಗಳ ಸದುಪಯೋಗ ಪಡೆಯಿರಿ: ಡಾ ಸುನೀಲ್.**



ಆಕಸ್ಮಿಕವಾಗಿ ಅಥವಾ ಇತರೆ ಕಾರಣಗಳಿಂದ ಮಗು ಅಪೌಷ್ಟಿಕತೆಗೆ ಒಳಗಾದಲ್ಲಿ ಪಾಲಕರು ತಮ್ಮ ಮಕ್ಕಳನ್ನು ಅಪೌಷ್ಟಿಕತೆಯ ನಿವಾರಣೆಗಾಗಿ ಮಕ್ಕಳ ತಜ್ಞರ ಮೂಲಕ ಆರೋಗ್ಯದ ತೊಂದರೆಯನ್ನು ಗುರ್ತಿಸಿ ಪೌಷ್ಟಿಕ ಆಹಾರೊಂದಿಗೆ ಚಿಕಿತ್ಸೆಯನ್ನು ನೀಡಿ ಗುಣಪಡಿಸುವ ರಿಮ್ಸ್ ನಲ್ಲಿರುವ "ಪೌಷ್ಟಿಕ ಪುನಶ್ಚೇತನ ಕೇಂದ್ರ (ಎನ್‌ಆರ್‌ಸಿ)" ಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಲು ಹರಿಜನವಾಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಸುನೀಲ್ ತಾಯಂದಿರಿಗೆ ಮನವಿ ಮಾಡಿದರು.

ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ ಗರ್ಭಿಣಿ ತಾಯಂದಿರ ತಪಾಸಣಾ ಶಿಬಿರಲ್ಲಿ ತಾಯಂದಿರು ಹಾಗೂ ಪಾಲಕರಿಗೆ ಜಾಗೃತಿ ನೀಡಿ ಮಾತನಾಡುತ್ತಾ ಮಗುವಿನ ಬೆಳವಣಿಗೆಗೆ ಅಡ್ಡಿಯಾಗುವ ಅಪೌಷ್ಟಿಕತೆಯನ್ನು ನಿವಾರಿಸಲು ಸರಕಾರವು ರಾಯಚೂರು ನಗರದ ರಿಮ್ಸ್ ಆಸ್ಪತ್ರೆಯ ನಾಲ್ಕನೆಯ ಮಹಡಿಯಲ್ಲಿ ಪೌಷ್ಟಿಕ ಪುನಶ್ಚೇತನ ಕೇಂದ್ರ (ಎನ್‌ಆರ್‌ಸಿ) ಇದ್ದು ಇಲ್ಲಿ 14 ದಿನಗಳ ಕಾಲ ಮಗುವಿಗೆ ಪೌಷ್ಟಿಕಾಹಾರವನ್ನು ವೈಜ್ಞಾನಿಕವಾಗಿ ನೀಡಲಾಗುವುದು ಎಂದು ತಿಳಿಸಿದರು. ಚಿಕಿತ್ಸೆ ನೀಡಲಾಗುವುದು. ತಾಯಂದಿರಿಗೆ 14 ದಿನಗಳ ಕಾಲ ಪ್ರತಿ ದಿನಕ್ಕೆ 370/- ರೂಪಾಯಿಯಂತೆ ಎನ್‌ಆರ್‌ಎಇಜಿ ಅಡಿಯ ಕೂಲಿಗೆ ಸಮಾನವಾದ ಮೊತ್ತವನ್ನು ಸಹ ಬ್ಯಾಂಕ್ ಖಾತೆಗೆ ಸಂದಾಯ ಮಾಡಲಾಗುವುದು.

ಈ ಸಂದರ್ಭದಲ್ಲಿ ದಂತ ತಜ್ಞರಾದ ಡಾ ಫೌಜೀಯಾ ಖಾಜಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಬಿಹೆಚ್‌ಇಓ ಸರೋಜಾ ಕೆ, ಫಾರ್ಮಸಿಸ್ಟ್, ಪ್ರಕಾಶ, ಎಲ್‌ಟಿಓ ಸೈಯದ್ ಖಮರುದ್ದೀನ್, ಶುಶ್ರೂಷಣಾಧಿಕಾರಿ ಲಕ್ಷ್ಮೀ, ಗಂಗಮ್ಮ, ಈರಮ್ಮ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಮಂಜುಳಾದೇವಿ, ಗಿರಿಜಾ, ಮರಿಯಮ್ಮ, ಕಾಳಿಕಾದೇವಿ, ಎಲ್‌ಡಿಸಿ ಮುಜಾಹೀದ್, ಡೆಂಟಲ್ ಹೈಜನಿಸ್ಟ್ ಖಾದಿರ್ ಹುಸೇನ್ ಸೇರಿದಂತೆ ತಾಯಂದಿರು ಹಾಜರಿದ್ದರು.

## ದೇವರ ಹೆಸರ ಮೇಲೆ ನಡೆಯುವ ಬಲಿ ನಿಲ್ಲಿಸಬೇಕು, ಭಕ್ತಿಯಿಂದ ದೇವರನ್ನು ಭಜಿಸಬೇಕು: ಶಾಂತಮಯ ಸ್ವಾಮಿಜಿ

ನೈಜ್ಯ ದೆಸೆ ನ್ಯೂಸ್





**ಹೈದರಾಬಾದ: ಡಿ 09 ಸಮಾಜದಲ್ಲಿ ತುಂಬಿರುವ ಮೂಢನಂಬಿಕೆಯಿಂದ ಭಕ್ತರು ಹೊರಗೆ ಬರಬೇಕು, ಭಕ್ತಿಯಿಂದ ದೇವರನ್ನು ಭಜಿಸಿ ಒಲಿಸಿಕೊಳ್ಳಬೇಕು. ದೇವರ ಹೆಸರ ಮೇಲೆ ನಡೆಯುವ ಬಲಿ ನಿಲ್ಲಬೇಕು. ಶ್ರೇಷ್ಠ ಗುರು ಭಕ್ತಿ ಭಾವದಿಂದ ಕೃಷ್ಣ ನನ್ನು ಒಲಿಸಿಕೊಂಡಿರುವುದು ಕನಕದಾಸರು ನೀಡಿರುವ ತತ್ವ ಸಂದೇಶವನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಎಂದು ಕರ್ನಾಟಕದ ಹಾಲುಮತ ಗುರುಪೀಠದ ಪರಂ ಪೂಜ್ಯ ರೇವಣ್ಣಸಿದ್ದೇಶ್ವರ ಶಾಂತಮಯ ಸ್ವಾಮಿಜಿ ನುಡಿದರು.**

ಅವರು ಭಾನುವಾರ ನಗರದ ಜಿಯಾಗೂಡ ನಗರಸಭೆ ಗ್ರೌಂಡನಲ್ಲಿ ಭಕ್ತ ಕನಕದಾಸರ 538ನೇ ಜಯಂತಿ ಉತ್ಸವದಲ್ಲಿ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದರು. ಆಸೆ ಎಂಬುದು ಇರಬಾರದು ಬಂಗಾರದಂತ ಮಾತುಗಳ ನಿರಂತರವಾಗಿ ಕೇಳುತ್ತಿರಬೇಕು. ಶಿವಶರಣರ ವಚನದಂತೆ ಮಾತು ಮಾಣಿಕ್ಯದಂತಿರಬೇಕು. ಮಾತು ಪ್ರೀತಿಯ ಮಾತಾಡಬೇಕು. ಮಾತಿನಿಂದ ಜಗಳವಾಗಬಾರದು. ಮಾತಿನಿಂದ ಎಲ್ಲರೂ ಒಂದೇ ಕಡೆ ಸೇರಿರಬೇಕು ಎಂಬ ಭಾವನೆ ಪ್ರತಿಯೊಬ್ಬರಲ್ಲಿ ನೆಲೆಸಬೇಕು ಅಂದಾಗ ಮಾತ್ರ ಮಾನವೀಯ ಮೌಲ್ಯಗಳು ಜೀವಂತವಾಗಿ ಇರಲ್ಲು ಸಾಧ್ಯವಿದೆ ಎಂದು ಶ್ರೀಗಳು ನುಡಿದರು.

ಸಮಾರಂಭವು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿ ಮಾತನಾಡಿದ ನಗರದ ಟ್ರಾಫಿಕ್ ಡಿಸಿಪಿ ಕನ್ನಡಿಗರಾದ ರಾಹುಲ ಹೆಗಡೆ ಐಪಿಎಸ್ ಇಂದು ನಾವು ಕರ್ನಾಟಕದ ಮಹಾನ್ ಕವಿ, ಭಕ್ತ ಮತ್ತು ಸಮಾಜ ಸುಧಾರಕರಾದ ಶ್ರೀ ಕನಕ ದಾಸರನ್ನು ಸ್ಮರಿಸಲು ಇಲ್ಲಿ ನಾವುಗಳು ಸೇರಿದ್ದೇವೆ. ತಮ್ಮ ಕಾವ್ಯ ಮತ್ತು ಕೀರ್ತನೆಗಳ ಮೂಲಕ ಅವರು ಜನರಿಗೆ ಸತ್ಯ, ನೀತಿ ಮತ್ತು ಮಾನವೀಯತೆಯ ಮಾರ್ಗವನ್ನು ತೋರಿಸಿದರು. ಎಂದು ಕನಕದಾಸರ ಕೀರ್ತನೆಗಳನ್ನು ಮೆಲುಕು ಹಾಕಿದರು. ಕನಕ ದಾಸರು ನಮಗೆ ಎರಡು ಸರಳ ಆದರೆ ಶಕ್ತಿಯುತ ಸಂದೇಶ ನೀಡಿದ್ದಾರೆ. 1) ನಿಧಿಯಿಂದ ಧರ್ಮ, ಧರ್ಮದಿಂದ ನಿಧಿ." ಅಂದರೆ - ನಮ್ಮ ಸಂಪತ್ತು ಧರ್ಮದ ಮಾರ್ಗದಲ್ಲಿ ಉಪಯೋಗವಾದಾಗ ಮಾತ್ರ ಮೌಲ್ಯವಿರುತ್ತದೆ. 2) ಮನುಜ ಹೇಳುವ ಮಾತು ಮಣಿಯಬೇಕು." ಅಂದರೆ ಒಳ್ಳೆಯ ಮಾತು, ವಿನಯ, ಮಾನವೀಯತೆ ಸದಾ ಮುಖ್ಯ. ಉಡುಪಿಯ ಕನಕನ ಕಿಂಡಿ ಘಟನೆ ನಾವು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಭಕ್ತನ ಶುದ್ಧ ಹೃದಯದ ಮುಂದೆ ದೇವರು ತಾನೇ ತಿರುಗಿ ದರ್ಶನ ನೀಡಿದ ಎಂಬುದು ಇಡೀ ಪ್ರಪಂಚಕೆ ಪ್ರಸಿದ್ದಿಯನ್ನು ಪಡೆದಿದೆ. ಭಕ್ತಿ, ಶ್ರಮ ಮತ್ತು ನಂಬಿಕೆಯ ಶಕ್ತಿಯನ್ನು ನಮಗೆ ಬೋಧಿಸುತ್ತದೆ. ಕನಕ ದಾಸರು ಎಲ್ಲರನ್ನು ಸಮಾನವಾಗಿ ನೋಡುವ ಗುಣವನ್ನು ಸಾರಿದರು. ಅವರ ಸಂದೇಶ ಇಂದು ನಮ್ಮ ಸಮಾಜಕ್ಕೂ ಬಹಳ ಮುಖ್ಯ ಜಾತಿ-ಭೇದ ಬೇಡ; ಮನುಷ್ಯನು ಮನುಷ್ಯನಾಗಿಯೇ ಬದುಕಬೇಕು, ನಾವು ಹೈದರಾಬಾದ್‌ನಲ್ಲಿ ವಾಸಿಸುತ್ತಿದ್ದರೂ, ಕನ್ನಡ, ಕರ್ನಾಟಕ ಮತ್ತು ನಮ್ಮ ಸಂಸ್ಕೃತಿ ಎಂದಿಗೂ ನಮ್ಮ ಹೃದಯದಿಂದ ದೂರವಾಗುವುದಿಲ್ಲ. ಎಲ್ಲರನ್ನು ಒಂದೇಡೆಗೆ ಸೇರಿಸುವಂತೆ ಕಾರ್ಯ ಮಾಡುತ್ತದೆ. ಒಕ್ಕಟೂ ಸಮಾಜದ ಅಭಿವೃದ್ಧಿಗೆ ನಾಂದಿ ಹಾಡುತ್ತದೆ.

ಇಂತಹ ಆಚರಣೆಗಳಿಂದ ನಮ್ಮನ್ನು ನಮ್ಮ ಮೂಲ ಮೌಲ್ಯಗಳಿಗೆ ಮತ್ತಷ್ಟು ಹತ್ತಿರ ಮಾಡುತ್ತದೆ ಎಂದು ರಾಹುಲ ಹೆಗಡೆ ಐಪಿಎಸ್ ನುಡಿದರು. ಇಂದು ಕನಕ ದಾಸರ ಉಪದೇಶಗಳನ್ನು ನೆನಪಿಸಿಕೊಂಡು, ನಾವು ದಿನನಿತ್ಯ ಜೀವನದಲ್ಲಿ, ಸತ್ಯವಾಗಿ ಬಾಳೋಣ, ಒಳ್ಳೆಯ ಮಾತಾಡೋಣ ಮತ್ತು ಸಮಾಜಕ್ಕೆ ಒಳ್ಳೆಯ ಕೆಲಸ ಮಾಡೋಣ. ಇದು ನಾವು ಕನಕದಾಸರಿಗೆ ನಿಜವಾದ ಗೌರವ ನೀಡಿದಂತೆ, ಶ್ರೀ ಕನಕ ದಾಸರ ಕೃಪೆ ಎಲ್ಲರ ಮೇಲೂ ಇರಲಿ. ಎಲ್ಲರೂ ಸುಖವಾಗಿ, ಆರೋಗ್ಯವಾಗಿ ಮತ್ತು ಬೆಳವಣಿಗೆಯ ಹಾದಿಯಲ್ಲಿ ಮುಂದುವರಿಯಲಿ." ಎಂದು ಎಲ್ಲರಿಗೂ ಶುಭಾಷಯ ಕೋರಿದರು.

**ಕನಕಶ್ರೀ ಪ್ರಶಸ್ತಿ ವಿತರಣೆ:** ಹೈದರಾಬಾದ ನಗರದಲ್ಲಿ ಕನಕದಾಸ ಜಯಂತಿ ಮಾಡಲು ಸರ್ವ ರೀತಿಯಿಂದ ಸುಮಾರು 40 ವರ್ಷದಿಂದ ಸತತವಾಗಿ ಪ್ರಯತ್ನ ಮಾಡಿ ಇಂದು ಯಶಸ್ವಿಯಾಗಿ ಕನಕದಾಸ ಜಯಂತಿ ನಿರ್ವಹಿಸಲು ಶ್ರಮಿಸಿದ ಕುರುಬ ಸಮಾಜದ ಹಿರಿಯರು ಅನುಭಾವಿಗಳಾದ ವೈಜಿನಾಥಪ್ಪ ಹಿರೋಡೆ ಹಾಗೂ ಜಗನಾಥ (ಟೇಲರ್) ಕುಂಟಬಿರ ಅವರಿಗೆ ಕನಕಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ತುಮಟುಂಟ ಅರುಣಕುಮಾರ, ಭಾಲ್ಕಿಯ ಬಾಲಾಜಿ ಜಬಾಡೆ, ನಾಗರಾಜ ಸೋರಾಳೆ, ದರಪಲ್ಲಿ ನರಸಿಂಹ, ಧರ್ಮೇಂದ್ರ ಪೂಜಾರಿ ಮಾತನಾಡಿದರು.

ವೇದಿಕೆಯ ಮೇಲೆ ವೈಜಿನಾಥಪ್ಪ ಹಿರೋಡೆ, ಜಗನಾಥ ಕುಂಟಬಿರ್, ರಾಜಕುಮಾರ ಮನ್ನಳಿ, ಬಸವರಾಜ ಲಾರಾ, ಅಮರನಾಥ ಹಿರೋಡೆ, ಶಿವಾಜಿ ಕುಂಟಬಿರ್, ಪ್ರಭು ಪೂಜಾರಿ ಉಪಸ್ಥಿತರಿದರು. ಮೊದಲಿಗೆ ಕನಕದಾಸರ ಭಾವಚಿತ್ರಕ್ಕೆ ಪರಂಪೂಜ್ಯ ಶ್ರೀ ರೇವಣ್ಣಸಿದ್ದೇಶ್ವರ ಶಾಂತಮಯ್ಯ ಸ್ವಾಮಿಜಿ ಪೂಜೆ ಸಲ್ಲಿಸುವ ಮೂಲಕ ಪುಷ್ಪವೃಷ್ಟಿ ಮಾಡಿದರು. ವೈಜಿನಾಥಪ್ಪ ಹಿರೋಡೆ ಸ್ವಾಗತಿಸಿದರು. ಹಣಮಂತ ಹಿರೋಡೆ ನಿರೂಪಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂ. ಎಸ್ ಶಲ್ಯ ತಂತ್ರ (MS Shalya Tantra)

ಎಂ. ಎಸ್ ಶಲ್ಯ ತಂತ್ರ (MS Shalya Tantra) ಎಂದರೆ ಆಯುರ್ವೇದದಲ್ಲಿ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಸ್ನಾತಕೋತ್ತರ ಪದವಿ (Master of Surgery), ಇದು ಶಸ್ತ್ರಚಿಕಿತ್ಸಾ ವಿಧಾನಗಳು, ಗಾಯದ ನಿರ್ವಹಣೆ ಮತ್ತು ಚಿಕಿತ್ಸೆಗಳ ಕುರಿತು 3 ವರ್ಷಗಳ ಕೋರ್ಸ್ ಆಗಿದೆ, ಇದಕ್ಕೆ BAMS ಪದವಿ ಮತ್ತು ಪ್ರವೇಶ ಪರೀಕ್ಷೆ (AIAPGET/PG KCET) ಶಲ್ಯ ತಂತ್ರ (ಸಾಮನ್ಯ) ದಲ್ಲಿನ ಎಂಎಸ್ ವಿದ್ಯಾರ್ಥಿಗಳಿಗೆ ಆಧುನಿಕ ಶಸ್ತ್ರಚಿಕಿತ್ಸೆಯ ತತ್ವಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ. ವಿಭಾಗವು ಗುದನಾಳದ ಕಾಯಿಲೆಗಳು, ಗಾಯ ನಿರ್ವಹಣೆ, ಮೂತ್ರದ ಅಸ್ವಸ್ಥತೆಗಳು ಮತ್ತು ಮುರಿತ ಗುಣಪಡಿಸುವ ಕ್ಷೇತ್ರಗಳಲ್ಲಿ ಗಣನೀಯ ಕೊಡುಗೆಗಳನ್ನು ನೀಡಿದೆ. ಈ ಕೋರ್ಸ್ ಗ್ರಂಥಗಳಲ್ಲಿ ವಿವರಿಸಿದ ಪ್ರಾಚೀನ ಶಸ್ತ್ರಚಿಕಿತ್ಸಾ ವಿಧಾನಗಳ ಅಧ್ಯಯನ, ವಿವಿಧ ಚಿಕಿತ್ಸಾ ವಿಧಾನಗಳ ಕ್ಲಿನಿಕಲ್ ಮತ್ತು ಶಸ್ತ್ರಚಿಕಿತ್ಸಾ ಅನ್ವಯಿಕೆಗಳು, ಆಯುರ್ವೇದ ವಿಧಾನದ ಪ್ರಕಾರ ಪೈಲ್ಸ್ ಮತ್ತು ಫಿಸ್ಟುಲಾಗಳಿಗೆ ಯಶಸ್ವಿ ಚಿಕಿತ್ಸೆ, ಜಿಗಣೆಗಳ ಮೂಲಕ ರಕ್ತ ಬಿಡುವ ಮೂಲಕ ದೀರ್ಘಕಾಲದ ಕಾಯಿಲೆಗಳ ಚಿಕಿತ್ಸೆ ಮತ್ತು ಸುಸಜ್ಜಿತ ಶಸ್ತ್ರಚಿಕಿತ್ಸಾ ರಂಗಮಂದಿರ ಮತ್ತು ಕಾರ್ಯವಿಧಾನ ಕೊಠಡಿಯಲ್ಲಿ ರೋಗಿಗಳ ಮೇಲೆ ಶಸ್ತ್ರಚಿಕಿತ್ಸಾ ವಿಧಾನಗಳ ಪ್ರಾಯೋಗಿಕ ತರಬೇತಿಯನ್ನು ಒಳಗೊಂಡಿದೆ. ಇದು ಆಯುರ್ವೇದದ ಮಹತ್ವದ ಸಂಶೋಧನಾ ಶಾಖೆಯಾಗಿದೆ. ಅಗತ್ಯ. ಶಸ್ತ್ರಚಿಕಿತ್ಸೆ ಮತ್ತು ಸಂಬಂಧಿತ ಕಾರ್ಯವಿಧಾನಗಳ ಮೇಲೆ ಕೇಂದ್ರೀಕರಿಸಿದ ಆಯುರ್ವೇದ ಔಷಧದ ಶಾಖೆಯಾದ ಶಲ್ಯತಂತ್ರದಲ್ಲಿ ಸ್ನಾತಕೋತ್ತರ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳುವುದು ಹಲವಾರು ಕಾರಣಗಳಿಗಾಗಿ ಅಮೂಲ್ಯವಾದ ಆಯ್ಕೆಯಾಗಿದೆ:ವಿಶೇಷ ಪರಿಣತಿ: ಶಲ್ಯತಂತ್ರವು ಶಸ್ತ್ರಚಿಕಿತ್ಸಾ ತಂತ್ರಗಳು ಮತ್ತು ಕಾರ್ಯವಿಧಾನಗಳಲ್ಲಿ ವಿಶೇಷ ಜ್ಞಾನ ಮತ್ತು ಕೌಶಲ್ಯಗಳನ್ನು ನೀಡುತ್ತದೆ, ಇದು ನಿಮ್ಮನ್ನು ಆಯುರ್ವೇದದ ಈ ಕ್ಷೇತ್ರದಲ್ಲಿ ಪರಿಣಿತರನ್ನಾಗಿ ಮಾಡುತ್ತದೆ.ಹೆಚ್ಚುತ್ತಿರುವ ಬೇಡಿಕೆ: ಆಯುರ್ವೇದ ಶಸ್ತ್ರಚಿಕಿತ್ಸಾ ಚಿಕಿತ್ಸೆಗಳು ಮತ್ತು ಚಿಕಿತ್ಸೆಗಳಿಗೆ ಹೆಚ್ಚುತ್ತಿರುವ ಬೇಡಿಕೆ ಇದ್ದು, ಶಲ್ಯತಂತ್ರದಲ್ಲಿ ಪರಿಣತಿ ಹೊಂದಿರುವ ವೈದ್ಯರಿಗೆ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಸಮಗ್ರ ವಿಧಾನ: ಶಲ್ಯತಂತ್ರ ಸೇರಿದಂತೆ ಆಯುರ್ವೇದವು ಆರೋಗ್ಯ ರಕ್ಷಣೆಗೆ ಸಮಗ್ರ ವಿಧಾನವನ್ನು ಅನುಸರಿಸುತ್ತದೆ, ಇದು ಸಮಗ್ರ, ರೋಗಿ-ಕೇಂದ್ರಿತ ಅಭ್ಯಾಸದಲ್ಲಿ ಆಸಕ್ತಿ ಹೊಂದಿರುವವರಿಗೆ ಆಕರ್ಷಕವಾಗಿರುತ್ತದೆ. , ಸಮಗ್ರ ಔಷಧ: ಅನೇಕ ರೋಗಿಗಳು ಸಮಗ್ರ ಆರೋಗ್ಯ ರಕ್ಷಣಾ ಆಯ್ಕೆಗಳನ್ನು ಹುಡುಕುತ್ತಾರೆ, ಶಲ್ಯತಂತ್ರದಂತಹ ಆಯುರ್ವೇದ ಪದ್ಧತಿಗಳನ್ನು ಆಧುನಿಕ ಔಷಧದೊಂದಿಗೆ ಸಂಯೋಜಿಸಿ ಉತ್ತಮ ವಿಧಾನಕ್ಕಾಗಿ ಪ್ರಯತ್ನಿಸುತ್ತಾರೆ., ಸಂಶೋಧನೆ ಮತ್ತು ನಾವೀನ್ಯತೆ: ಶಲ್ಯತಂತ್ರದಲ್ಲಿ ಸ್ನಾತಕೋತ್ತರ ಅಧ್ಯಯನಗಳು ಸಂಶೋಧನೆಯನ್ನು ಒಳಗೊಂಡಿರಬಹುದು, ಇದು ಆಯುರ್ವೇದ ಶಸ್ತ್ರಚಿಕಿತ್ಸಾ ಪದ್ಧತಿಗಳ ಪ್ರಗತಿ ಮತ್ತು ಆಧುನೀಕರಣಕ್ಕೆ ಕೊಡುಗೆ ನೀಡುತ್ತದೆ., ವೈಯಕ್ತಿಕ ತೃಪ್ತಿ: ನೀವು ಆಯುರ್ವೇದ ಔಷಧ ಮತ್ತು ಶಸ್ತ್ರಚಿಕಿತ್ಸಾ ತಂತ್ರಗಳಲ್ಲಿ ಉತ್ಸಾಹ ಹೊಂದಿದ್ದರೆ, ಶಲ್ಯತಂತ್ರವನ್ನು ಅನುಸರಿಸುವುದು ವೈಯಕ್ತಿಕವಾಗಿ ತೃಪ್ತಿಕರ ಮತ್ತು ತೃಪ್ತಿಕರವಾಗಿರುತ್ತದೆ. ಸಂಸ್ಕೃತ ಆಯುರ್ವೇದ ವೈದ್ಯಕೀಯ ಕಾಲೇಜು ಸ್ನಾತಕೋತ್ತರ ಪದವಿ ಆಕಾಂಕ್ಷಿಗಳಿಗೆ ಅತ್ಯುತ್ತಮ ಕಲಿಕಾ ವಾತಾವರಣವನ್ನು ನೀಡುತ್ತದೆ. ಅನೋರೆಕ್ಟಲ್ (ಗುದ ಮತ್ತು ಗುದದ್ವಾರದ) ಅಂಗರಚನಾಶಾಸ್ತ್ರ ಮತ್ತು ರೋಗಶಾಸ್ತ್ರ: ಗುದ ಮತ್ತು ಗುದದ್ವಾರದ ರಚನೆ, ರೋಗಗಳ ಬಗ್ಗೆ ಸಮಗ್ರ ಜ್ಞಾನ. ಕ್ಷರಕರ್ಮ ಮತ್ತು ಕ್ಷರಸೂತ್ರ: ಕ್ಷಾರ (ಕ್ಷಾರ ದ್ರಾವಣ) ಮತ್ತು ಕ್ಷರಸೂತ್ರ (ದಾರದ ಚಿಕಿತ್ಸೆ) ಬಳಸಿ ಚಿಕಿತ್ಸೆ ನೀಡುವ ವಿಧಾನಗಳು., ಶಸ್ತ್ರ ಮತ್ತು ಕ್ಷಾರಗಳ ಬಳಕೆ: ವಿವಿಧ ರೀತಿಯ ಶಸ್ತ್ರಗಳು (ಕತ್ತರಿ, ಚಾಕುಗಳು) ಮತ್ತು ಕ್ಷಾರಗಳನ್ನು ತಯಾರಿಸಿ ಬಳಸುವ ಕೌಶಲ್ಯ., ಶಸ್ತ್ರಚಿಕಿತ್ಸಾ ತಂತ್ರಗಳು: ಆಯುರ್ವೇದದ ತತ್ವಗಳ ಆಧಾರದ ಮೇಲೆ ಶಸ್ತ್ರಚಿಕಿತ್ಸೆ ಮಾಡುವ ವಿಧಾನಗಳು. ಆಯುರ್ವೇದ ಔಷಧ ವೈದ್ಯರ ಭವಿಷ್ಯ ಆಯುರ್ವೇದವು ಶಲ್ಯ ತಂತ್ರ ಕಾರ್ಯಕ್ರಮದ ಕೇಂದ್ರಬಿಂದುವಾಗಿದೆ. ವಿದ್ಯಾರ್ಥಿಗಳು ಉಪನ್ಯಾಸಗಳು ಮತ್ತು ಪ್ರಾಯೋಗಿಕ ಜ್ಞಾನದ ಮೂಲಕ ರೋಗಶಾಸ್ತ್ರೀಯ ಪರಿಸ್ಥಿತಿಗಳು ಮತ್ತು ಮಾರ್ಗಗಳ ಬಗ್ಗೆ ಜ್ಞಾನವನ್ನು ಪಡೆಯುತ್ತಾರೆ. ಬೋಧನೆಯಲ್ಲಿ, ಆಯುರ್ವೇದ ಪುಸ್ತಕಗಳನ್ನು ಬಳಸಲಾಗುತ್ತದೆ ಮತ್ತು ನಿರ್ದೇಶನದ ಉಲ್ಲೇಖಗಳನ್ನು ನೀಡಲಾಗುತ್ತದೆ. ಆಯುರ್ವೇದ ವ್ಯವಸ್ಥೆಯ ಬಗ್ಗೆ ಪರಿಚಿತ ಮತ್ತು ಮಾಹಿತಿ ಹೊಂದಿರುವ ವೈದ್ಯರಿಗೆ ತರಬೇತಿ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಅರ್ಜಿದಾರರು ಆನ್‌ಲೈನ್ ಮತ್ತು ವೈಯಕ್ತಿಕವಾಗಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಎಂದರೆ ಆಕಾಂಕ್ಷಿಗಳು ಓಇಇಖ ಅಧಿಕೃತ ವೆಬ್‌ಸೈಟ್ ಮತ್ತು ವಿಶ್ವವಿದ್ಯಾಲಯದ ಅಧಿಕೃತ ಸೈಟ್‌ಗೆ ಭೇಟಿ ನೀಡಿ ಅಗತ್ಯ ದಾಖಲಾತಿಗಳನ್ನು ಪೋರ್ಟಲ್‌ನಲ್ಲಿ ಪ್ರಕಟಿಸಬೇಕು. ಶಿಕ್ಷಕರು MS Shalakya Tantra ಕಾಲೇಜುಗಳ ಪ್ರವೇಶ ಕಚೇರಿಗೆ ಭೇಟಿ ನೀಡಿ ಆಫ್‌ಲೈನ್ ಆಯ್ಕೆಗಾಗಿ ಅಭ್ಯರ್ಥಿಗಳಿಗೆ ಎಲ್ಲಾ ದಾಖಲೆಗಳನ್ನು ಹಸ್ತಾಂತರಿಸಬೇಕಾಗುತ್ತದೆ. ಇಲ್ಲಿ ಸಾಮಾನ್ಯ ಪ್ರವೇಶ ಪ್ರಕ್ರಿಯೆಯ ವಿವರಗಳಿವೆ. ಅರ್ಜಿದಾರರು ತಮ್ಮ ಆಯ್ಕೆಯ ಕಾಲೇಜಿಗೆ ಪ್ರವೇಶ ಪಡೆಯಲು ಎಂಎಸ್ ಶಲಾಕ್ಯ ತಂತ್ರ ಪಠ್ಯಕ್ರಮದ ವಿವರಗಳನ್ನು ತಿಳಿದಿರಬೇಕು. ಅರ್ಜಿ ನಮೂನೆಯನ್ನು ಪೂರ್ಣಗೊಳಿಸಿದ ನಂತರ, ಅರ್ಜಿದಾರರು ತಮ್ಮ ಆಯ್ಕೆಯ ಕಾಲೇಜಿಗೆ ಪ್ರವೇಶವನ್ನು ಖಚಿತಪಡಿಸಿಕೊಳ್ಳಲುಎಂ-ಎಸ್ ಶಲಾಕ್ಯ ತಂತ್ರ ಶುಲ್ಕವನ್ನು ಪಾವತಿಸಬೇಕು.

# ಕೆಕೆಆರ್‌ಟಿಸಿ ಬಸ್ ಪಲ್ಟಿ; ಶಾಲಾ ವಿದ್ಯಾರ್ಥಿಗಳು ಸೇರಿದಂತೆ 15 ಜನರಿಗೆ ಗಾಯ; ಕಂಡಕ್ಟರ್ ಸ್ಥಿತಿ ಗಂಭೀರ

ನೈಜ್ಯ ದೆಸೆ ನ್ಯೂಸ್







**ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ಬಳಿ ಕೆಕೆಆರ್‌ಟಿಸಿ ಬಸ್ ಅತಿವೇಗದಿಂದಾಗಿ ಪಲ್ಟಿಯಾಗಿದ್ದು, 15 ವಿದ್ಯಾರ್ಥಿಗಳು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ಈ ದುರ್ಘಟನೆಯಲ್ಲಿ ಬಸ್ ನಿರ್ವಾಹಕನ ಸ್ಥಿತಿ ಚಿಂತಾಜನಕವಾಗಿದ್ದು, ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ.**

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅಂಚೆಸುಗೂರು ಬಳಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕೆಕೆಆರ್‌ಟಿಸಿ (ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ) ಬಸ್ಸೊಂದು ಪಲ್ಟಿಯಾಗಿದ್ದು, ವಿದ್ಯಾರ್ಥಿಗಳು ಸೇರಿದಂತೆ ಸುಮಾರು 15 ಜನ ಪ್ರಯಾಣಿಕರು ಗಾಯಗೊಂಡಿದ್ದಾರೆ. ಈ ಘಟನೆಯಲ್ಲಿ ಬಸ್‌ನ ನಿರ್ವಾಹಕನ ಸ್ಥಿತಿ ಚಿಂತಾಜನಕವಾಗಿದೆ ಎಂದು ವರದಿಯಾಗಿದೆ. ಘಟನೆ ಇಂದು (ಡಿ.09) ಬೆಳಗ್ಗೆ ದೇವದುರ್ಗ ಠಾಣಾ ವ್ಯಾಪ್ತಿಯ ಅಂಚೆಸುಗೂರು ಗ್ರಾಮದಿಂದ ದೇವದುರ್ಗ ಪಟ್ಟಣಕ್ಕೆ ಹೊರಟಿದ್ದ ಕೆಕೆಆರ್‌ಟಿಸಿ ಬಸ್‌ನಲ್ಲಿ ನಡೆದಿದೆ. ಅಂಚೆಸುಗೂರು ಗ್ರಾಮದಿಂದ ಸ್ವಲ್ಪ ದೂರದಲ್ಲಿ, ಬಸ್ ಅತಿ ವೇಗದಲ್ಲಿ ಚಲಿಸುತ್ತಿದ್ದ ಕಾರಣದಿಂದ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದಲ್ಲಿ ಪಲ್ಟಿಯಾಗಿದೆ. ಬಸ್ಸಿನಲ್ಲಿ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 40ಕ್ಕೂ ಹೆಚ್ಚು ಜನ ಪ್ರಯಾಣಿಸುತ್ತಿದ್ದರು.

ಈ ದುರ್ಘಟನೆಯಲ್ಲಿ ಬಸ್‌ನ ನಿರ್ವಾಹಕ ಬಸವರಾಜು ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ತಕ್ಷಣ ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ ನಂತರ, ಗಂಭೀರವಾಗಿ ಗಾಯಗೊಂಡಿರುವ ನಿರ್ವಾಹಕ ಬಸವರಾಜು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ, ವಿದ್ಯಾರ್ಥಿಗಳು ಸೇರಿದಂತೆ ಉಳಿದ 15 ಜನ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆ ನೀಡಲಾಗಿದ್ದು, ಯಾವುದೇ ಜೀವಹಾನಿ ಸಂಭವಿಸಿಲ್ಲ ಎಂದು ಪೊಲೀಸರು ದೃಢಪಡಿಸಿದ್ದಾರೆ. ಘಟನೆಯ ಸುದ್ದಿ ತಿಳಿದ ತಕ್ಷಣ ಸ್ಥಳೀಯರು ಮತ್ತು ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆಗೆ ನೆರವು ನೀಡಿದರು. ಗಾಯಗೊಂಡ ವಿದ್ಯಾರ್ಥಿಗಳು ಮತ್ತು ಇತರ ಪ್ರಯಾಣಿಕರು ಸಣ್ಣಪುಟ್ಟ ಗಾಯಗಳೊಂದಿಗೆ ಅಪಾಯದಿಂದ ಪಾರಾಗಿದ್ದಾರೆ.

ಕೆಕೆಆರ್‌ಟಿಸಿ ಬಸ್ಸುಗಳು ಹಳ್ಳಿಗಳಿಂದ ಪಟ್ಟಣ ಪ್ರದೇಶಗಳಿಗೆ ಪ್ರಯಾಣಿಸುವಾಗ ವೇಗದ ಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಚಾಲಕರು ಜವಾಬ್ದಾರಿಯುತವಾಗಿ ಬಸ್ ಚಾಲನೆ ಮಾಡಬೇಕು. ಬಸ್ಸುಗಳ ನಿರ್ವಹಣೆ ಸರಿಯಾಗಿರಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಚಾಲಕನ ಅತಿ ವೇಗದ ಚಾಲನೆಯಿಂದಲೇ ಈ ಅಪಘಾತ ಸಂಭವಿಸಿದ್ದು, ಚಾಲಕನ ವಿರುದ್ಧ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ತೋಟಗಾರಿಕೆ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಎಂಎಲ್ಸಿ ಬಸನಗೌಡ ಬಾದರ್ಲಿ ಅಧಿವೇಶನದಲ್ಲಿ ಪ್ರಸ್ತಾವನೆ,

ನೈಜ್ಯ ದೆಸೆ ನ್ಯೂಸ್





**ಬೆಳಗಾವಿಯಲ್ಲಿ ನಡೆಯುತ್ತಿರುವ ಎರಡನೇ ದಿನದ ಚಳಿಗಾಲದ ಅಧಿವೇಶನದಲ್ಲಿ ಸಿಂಧನೂರಿನಲ್ಲಿರುವ ತೋಟಗಾರಿಕೆ ಇಲಾಖೆ ಕಚೇರಿಗೆ ಹೊಂದಿಕೊಂಡಿರುವ 22 ಎಕರೆ ಜಮೀನಿನಲ್ಲಿ ತೋಟಗಾರಿಕೆ ವಿ.ವಿದ್ಯಾಲಯ ನಿರ್ಮಾಣ ಮಾಡಿ, ಸಾರ್ವಜನಿಕರಿಗೆ ನಡೆದಾಡಲು ಪಾರ್ಕ್ ನಿರ್ಮಾಣ ಮಾಡಿ, ತೋಟಗಾರಿಕೆ ಇಲಾಖೆಯ ಜಮೀನನ್ನು ಅಭಿವೃದ್ಧಿ ಪಡಿಸಲು ಸಚಿವರಿಗೆ ಪ್ರಸ್ತಾವನೆಯನ್ನು ಎಂಎಲ್ಸಿ ಬಸನಗೌಡ ಬಾದರ್ಲಿ ಸಲ್ಲಿಸಿದರು.**

ಈ ಕುರಿತು ಉತ್ತರ ನೀಡಿದ ಕೃಷಿ ಸಚಿವರು, 8 ಕೋಟಿ ರೂಪಾಯಿಯಲ್ಲಿ ನಡೆದಾಡುವ ಪಾರ್ಕ್ ಕುರಿತು ಕಾರ್ಯಕ್ಕೆ ಕೆಕೆಆರ್ ಡಿಬಿಗೆ ಸಲ್ಲಿಸಲಾಗಿದೆ. ಅದನ್ನ ಮಾಡಬಹುದು. ಆದರೆ ವಿ.ವಿದ್ಯಾಲಯ ಸಂಬಂಧ ಪ್ರಾರಂಭಕ್ಕೆ ಯಾವುದೇ ಪ್ರಸ್ತಪವು ಈಗ ಇಲ್ಲ ಮುಂದೆ ಬಂದಾಗ ನೋಡೋಣ ಎಂದರು. ಸೋಮವಾರವು ಕೂಡಾ ಸಿಂಧನೂರಿನ ಹೃದಯ ಭಾಗದಲ್ಲಿರುವ ಆಹಾರ ನಾಗರಿಕ ಸರಬರಾಜು ಇಲಾಖೆಗೆ ಸಂಬಂಧಿಸಿದ ಒಟ್ಟು 1ಎಕರೆ 1 ಗುಂಟೆ ಜಾಗದಲ್ಲಿರುವ ಗೋದಾಮು ಸಿತಿಲ ಅವಸ್ಥೆಯಲ್ಲಿದೆ. ಈ ಸದರಿ ಜಾಗವನ್ನು ಸಂರಕ್ಷಣೆ ಮಾಡಿ, ಸರ್ಕಾರದ ಇನ್ನಿತರೆ ಅಗತ್ಯ ವೈಜ್ಞಾನಿಕ ಕಟ್ಟಡಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಲು ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಸಚಿವರಲ್ಲಿ ಗಮನ ಸೆಳೆದರು.

# ಅಪ್ರಾಪ್ತ ಬಾಲಕಿಯ ಮೇಲೆ ಮಾನಭಂಗಕ್ಕೆ ಯತ್ನಿಸಿದ ಆರೋಪಿಗೆ 5 ವರ್ಷ ಶಿಕ್ಷೆ ಹಾಗೂ 65 ಸಾವಿರ ದಂಡ ವಿಡಿಸಿದ ಕೋರ್ಟ್

ನೈಜ್ಯ ದೆಸೆ ನ್ಯೂಸ್




**ಲಿಂಗಸಗೂರು: ಡಿ 10 :- ತಾಲೂಕಿನ ಸದರಿ ಪ್ರಕರಣದಲ್ಲಿ ಆರೋಪಿತನಾದ ಶಿವರಾಜ ತಂದೆ ಗದ್ದೆಪ್ಪ ಈತನು 2021 ರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಅಪ್ರಾಪ್ತ ಬಾಲಕಿಂ-ಯ ಮೇಲೆ ಮಾನಭಂಗ ಮಾಡಲು ಪ್ರಯತ್ನಿಸಿ ಅವಳ ಬಟ್ಟೆ ಹಿಡಿದು ಎಳೆದಾಡಿ ಜೀವ ಬೆದರಿಕೆ ಹಾಕಿದ್ದಾರೆಂದು ಬಾಲಕಿ ನೀಡಿದ ದೂರಿನ ಆಧಾರದ ಮೇಲೆ ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.**

ನ್ಯಾಯಾಲಯಕ್ಕೆ ಆಗಿನ ತನಿಖಾಧಿಕಾರಿ ಎಸ್ ಎಸ್ ಹುಲ್ಲೂರು ಡಿವೈ-ಎಸ್‌ಪಿ ತನಿಖೆ ಮಾಡಿ ದೋಷರೋಪಣೆ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಪ್ರಕರಣದ ವಾದ ವಿವಾದಗಳನ್ನು ಆಲಿಸಿದ ನ್ಯಾಯಾಧೀಶರಾದ ಬಿ.ಬಿ.ಜಕಾತಿ 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ರಾಯಚೂರು, ಪೀಠಾಸೀನ ಸಿಂಧನೂರು ಇವರು ಪರಿಶಿಷ್ಟ ಜಾತಿಗೆ ಸೇರಿದ ಅಪ್ರಾಪ್ತ ಬಾಲಕಿಯ ಮೇಲೆ ಆರೋಪಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು ಸಾಬೀತಾಗಿದ್ದರಿಂದ ಆರೋಪಿಗೆ 05 ವರ್ಷ ಸಾದಾ ಕಾರಾಗೃಹ ಶಿಕ್ಷೆ ಮತ್ತು 65 ಸಾವಿರ ರೂ ದಂಡ ವಿಧಿಸಿ ದಂಡದ ಮೊತ್ತವನ್ನು ಭಾದಿತಳಿಗೆ (ಬಾಲಕಿಗೆ) ನೀಡುವಂತೆ ಇಂದು ನ್ಯಾಯಾಲಯವು ತೀರ್ಪು ನೀಡಿದ್ದು ಇರುತ್ತದೆ.

ಮತ್ತು ಸರಕಾರದ ಸಂತ್ರಸ್ತರ ಪರಿಹಾರ ನಿಧಿಯಿಂದ 2 ಲಕ್ಷ ರೂಪಾಯಿ ಪರಿಹಾರ ನೀಡಬೇಕೆಂದು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಆದೇಶ ಮಾಡಿರುತ್ತಾರೆ. ಸರಕಾರದ ಪರವಾಗಿ ಮಂಜುನಾಥ ಬೇರಿ ಸರಕಾರಿ ಅಭಿಯೋಜಕರು ವಾದ ಮಂಡಿಸಿರುತ್ತಾರೆ ಹಾಗೂ ನಿಂಗಯ್ಯ ಮತ್ತು ಮಂಜುನಾಥ ಪಿ.ಸಿ.ರವರು ನ್ಯಾಯಾಲಯಕ್ಕೆ ಸಾಕ್ಷಿದಾರರನ್ನು ಸೂಕ್ತ ಸಮಯದಲ್ಲಿ ಹಾಜರುಪಡಿಸಿರುತ್ತಾರೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪೋತ್ನಾಳ ವಲಯ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಗಾನವಿ ಪ್ರಥಮ-ಪ್ರಶಸ್ತಿ ಪ್ರಧಾನ

ನೈಜ್ಯ ದೆಸೆ ನ್ಯೂಸ್



**ಮಾನ್ವಿ: ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಇಂಗ್ಲೀಷ್ ಕಂಠಪಾಠದಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರಿ ಗಾನವಿ ವಿದ್ಯಾರ್ಥಿಗೆ ಪ್ರಶಸ್ತಿ ಪತ್ರ ನೀಡಲಾಯಿತು. ತಾಲ್ಲೂಕಿನ ಚಿಕ್ಕಕೊಟ್ನೇಕಲ್ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪೋತ್ನಾಳ ವಲಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ, ಪ್ರತಿಭಾನ್ವಿತ ವಿದ್ಯಾರ್ಥಿನಿ ಕುಮಾರಿ ಗಾನವಿ ಇಂಗ್ಲೀಷ್ನಲ್ಲಿ ಕಂಠಪಾಠ ಸಾಧನೆ ಮಾಡಿ, ಶಾಲೆಗೆ ಮತ್ತು ಗ್ರಾಮಕ್ಕೆ ಕೀರ್ತಿ ತಂದಿದ್ದಾಳೆ.**

ಸತತ ಎರಡನೇ ಬಾರಿ ಸಾಧನೆ ಕುಮಾರಿ ಗಾನವಿಯವರ ಪ್ರತಿಭೆಗೆ ಇದು ಮೊದಲ ಮನ್ನಣೆಯಲ್ಲ. ಕಳೆದ ವರ್ಷ ಕೂಡ ಪೋತ್ನಾಳ ವಲಯ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಅವರು ಪ್ರಥಮ ಸ್ಥಾನ ಪಡೆದಿದ್ದರು. ಈ ಮೂಲಕ, ಸತತ ಎರಡನೇ ಬಾರಿಗೆ ಪ್ರಶಸ್ತಿಯನ್ನು ಪಡೆದು ತಮ್ಮ ಪ್ರತಿಭೆಯನ್ನು ಸ್ಥಿರವಾಗಿ ಪ್ರದರ್ಶಿಸಿದ್ದಾರೆ.

ಗಾನವಿ ಅವರು ತಂದೆ ರಾಮನಗೌಡ ಅವರ ಪುತ್ರಿಯಾಗಿದ್ದು, ಇವರ ಈ ಸಾಧನೆಯಿಂದ ದೇವಿಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ, ಪೋಷಕರು ಮತ್ತು ದೇವಿಪುರ ಗ್ರಾಮಕ್ಕೆ ಹೆಮ್ಮೆ ತಂದಿದ್ದಾರೆ. ಗಾನವಿಯವರ ಮುಂದಿನ ತಾಲೂಕು ಮಟ್ಟದ ಹಂತದ ಸ್ಪರ್ಧೆಗಳಿಗೆ ಶಾಲಾ ಮುಖ್ಯ ಶಿಕ್ಷಕರು ಸಹ ಶಿಕ್ಷಕಿಯರು ಹಾಗೂ ಅತಿಥಿ ಶಿಕ್ಷಕರ ಸೇರಿದಂತೆ ಶಾಲಾ ಆಡಳಿತ ಮಂಡಳಿ ಹಾಗೂ ಗ್ರಾಮಸ್ಥರು ಶುಭ ಹಾರೈಸಲಾಗಿದೆ.

# ಶ್ರೀ ಅಡವಿ ಅಮರೇಶ್ವರ ಮಠದ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರ ಪುಣ್ಯಸ್ಮರಣೆ

ನೈಜ್ಯ ದೆಸೆ ನ್ಯೂಸ್



**ಮಾನ್ವಿ: ತಾಲೂಕಿನ ಸುವರ್ಣಗಿರಿ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರ ಪುಣ್ಯಸ್ಮರಣೋತ್ಸವ ಅಂಗವಾಗಿ ಸುವರ್ಣಗಿರಿ ವೀರಕ್ತಮಠ ವಳ್ಳಬಳ್ಳಾರಿಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರ ಕತೃ ಗದ್ದುಗೆಗೆ ರುದ್ರಾಭೀಷೇಕ ,ಮಹಾಮಂಗಳರಾತಿ ನಡೆಸಲಾಯಿತು.**

ಶ್ರೀ ಮಠದ ಆವರಣದಲ್ಲಿ ಹಾನಗಲ್ ಶ್ರೀ ಗುರುಕುಮಾರೇಶ್ವರ ವೇದಿಕೆಯಲ್ಲಿ ನಡೆದ ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಸುವರ್ಣಗಿರಿ ವೀರಕ್ತಮಠ ವಳ್ಳಬಳ್ಳಾರಿಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಆಶೀರ್ವಾಚನ ನೀಡಿ ಹಿಂದಿನ ದಿನಗಳಲ್ಲಿ ದಟ್ಟವಾದ ಅರಣ್ಯ ಪ್ರದೇಶವಾದ ಅಡವಿ ಅಮರೇಶ್ವರ ಗ್ರಾಮವನ್ನು ಸುವರ್ಣಗಿರಿ ವೀರಕ್ತಮಠ ವಳ್ಳಬಳ್ಳಾರಿಯ ಲಿಂ.ಚನ್ನಬಸವ ಶಿವಯೋಗಿಗಳು ತಮ್ಮ ಶಿವಯೋಗದ ಶಕ್ತಿಯಿಂದ ಪುಣ್ಯಮಯವಾದ ಸುಕ್ಷೇತ್ರವನ್ನಾಗಿಸಿದರು. ಕಾಶಿಯಿಂದ ತಂದ ಲಿಂಗವನ್ನು ಪ್ರತಿಷ್ಠಾಪಿಸುವ ಮೂಲಕ ಭಕ್ತರ ಇಷ್ಟರ್ಥಗಳನ್ನು ನೀಡುವ ಜಾಗೃತ ಪುಣ್ಯಕ್ಷೇತ್ರವನ್ನಾಗಿಸಿದರೆ. ಹಾಗೂ ತಮ್ಮ ಕರಕಮಲ ಸಂಜತರಾದ ವಳ್ಳಬಳ್ಳಾರಿಯ ಮಠದ ಮರಿದೇವರನ್ನು ಶ್ರೀ ಅಡವಿ ಅಮರೇಶ್ವರ ಮಠಕ್ಕೆ ಪೀಠಾಧಿಕಾರಿಯನ್ನಾಗಿ ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರನ್ನು ನೇಮಿಸಿದ್ದಾರೆ.

ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರು ಶಾಂತ ಸ್ವಭವದಿಂದ ಭಕ್ತರ ಹೃದಯದಲ್ಲಿ ಸ್ಥಾನವನ್ನು ಪಡೆದು ಶ್ರೀಮಠದ ಮೂಲಕ ಈ ಭಾಗದಲ್ಲಿ ಧಾರ್ಮಿಕ,ಶೈಕ್ಷಣಿಕ,ಸಾಹಿತ್ಯಿಕ, ಕ್ಷೇತ್ರಗಳಲ್ಲಿ ಹಲವು ಹತ್ತು ಕಾರ್ಯಕ್ರಮಗಳ ಮೂಲಕ ಶ್ರೀಮಠವನ್ನು ಶ್ರೀಮಂತಗೊಳಿಸಿ ಭಕ್ತರನ್ನು ಉದ್ದಾರ ಮಾಡಿ ಶಿವನಲ್ಲಿ ಲಿಂಗೈಕ್ಯರಾಗಿದ್ದಾರೆ. ಉತ್ತರಾಧಿಕಾರಿಗಳಾದ ಶ್ರೀ ಸುವರ್ಣಗಿರಿ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳಿಗೂ ಕೂಡ ಶ್ರೀಮಠದ ಭಕ್ತರು ತಮ್ಮ ಮನೆಯ ಮಗನಂತೆ ಗೌರವ,ಭಕ್ತಿಯ ಮೂಲಕ ಶ್ರೀ ಮಠದ ಅಭಿವೃದ್ಧಿ ಮಾಡುವುದಕ್ಕೆ ಸಹಕಾರ ನೀಡಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುವರ್ಣಗಿರಿ ವೀರಕ್ತಮಠ ವಳ್ಳಬಳ್ಳಾರಿಯ ಕಿರಿಯ ಶ್ರೀಗಳಾದ ಶ್ರೀ ಬಸವಲಿಂಗ ಮಹಾಸ್ವಾಮಿಗಳು ,ಯದ್ದಲದೊಡ್ಡಿ ಸುವರ್ಣಗಿರಿ ವೀರಕ್ತಮಠದ ಶ್ರೀ ಮಹಾಲಿಂಗ ಮಹಾಸ್ವಾಮಿಗಳು, ಸುವರ್ಣಗಿರಿ ಶ್ರೀ ಅಡವಿ ಅಮರೇಶ್ವರ ಮಠದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು ,ಸಂತೆಕಲ್ಲೂರು ಘನಮಠೇಶ್ವರ ಮಠದ ಗುರುಬಸವ ಮಹಾಸ್ವಾಮಿಗಳು, ಕರೆಗುಡ್ಡ ಶ್ರೀ ಮಹಾಂತಲಿಂಗ ಮಹಾಸ್ವಾಮಿಗಳು, ಸಿರುಗುಪ್ಪ ಶ್ರೀ ಬಸವ ಮಹಾಮನೆಯ ಶ್ರೀ ಬಸವಭೂಷಣ ಮಹಾಸ್ವಾಮಿಗಳು ಸೇರಿದಂತೆ ಗಣ್ಯರು ,ಶ್ರೀಮಠದ ಭಕ್ತರು ಭಾಗವಹಿಸಿದರು. ಮಾನ್ವಿ: ತಾಲೂಕಿನ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರ ಕತೃ ಗದುಗೆಗೆ ರುದ್ರಭಿಷೇಕ ನಡೆಸಲಾಯಿತು. ಮಾನ್ವಿ: ತಾಲೂಕಿನ ಶ್ರೀ ಅಡವಿ ಅಮರೇಶ್ವರ ಮಠದಲ್ಲಿ ಶ್ರೀ ಲಿಂ.ಶಾಂತಮಲ್ಲ ಮಹಾಸ್ವಾಮಿಗಳವರ ಪುಣ್ಯಸ್ಮಾರಣೋತ್ಸವ ಅಂಗವಾಗಿ ಸುವರ್ಣಗಿರಿ ವೀರಕ್ತಮಠ ವಳ್ಳಬಳ್ಳಾರಿಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳವರು ಆರ್ಶೀವಚನ ನೀಡಿದರು.